ಒಬ್ಬ ಮಾರಾಟವಾದ ಪತ್ರಕರ್ತ ಸಾವಿರ ಭಯೋತ್ಪಾದಕರ ಸಮಾನ
-ಡಾ|| ಬಿ.ಆರ್. ಅಂಬೇಡ್ಕರ್

PRGI No: KARKAN/2023/88369

# ಮುಸ್ಸಂಜೆ ಸಮಯ

MUSSANJE SAMAYA

ಕನ್ನಡ ಸಂಜೆ ದಿನಪತ್ರಿಕೆ
Evening Daily paper

EDITOR : R. RAGHAVENDRACHARI musanjesamaya21@gmail.com

ಪತ್ರಕರ್ತರ ಸಂಘಟನೆಯಾದ
ಪ್ರೆಸ್ ಕ್ಲಬ್ ಕೌನ್ಸಿಲ್(ರಿ.)
ಸಂಸ್ಥೆಗೆ ರಾಜ್ಯಾದ್ಯಂತ ಜಿಲ್ಲಾದ್ಯಕ್ಷರ ನೇಮಕಾತಿಗೆ ಅರ್ಜಿ ಆಹ್ವಾನ
ಸಂಪರ್ಕಿಸಿ
9972937309
8553949970



ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ಕೊಡಗು, ತುಮಕೂರು, ಶಿವಮೊಗ್ಗ, ಬೆಂ.ಗ್ರಾಮಾಂತರ, ಬೆಂಗಳೂರು

## ರಾಜ್ಯದಲ್ಲಿ ಸಿಎಂ, ಸಚಿವರ ಸ್ಟಿಂಗ್ ಮಾಡಲು ಯತ್ನಿಸಿದವರ ರಹಸ್ಯ ಬಿಚ್ಚಿಟ್ಟ ಸಚಿವ ಸತೀಶ್ ಜಾರಕಿಹೊಳಿ!

**ಮುಸ್ಸಂಜೆ ಸಮಯ,**

ಬೆಂಗಳೂರು: ರಾಜ್ಯ ರಾಜಕೀಯದಲ್ಲಿ ಭಾರೀ ಕೋಲಾಹಲ ಸೃಷ್ಟಿಸಿರುವ ಸಚಿವರ ವಿರುದ್ಧದ 'ಸ್ಟಿಂಗ್ ಆಪರೇಷನ್' (ಮಾರುವೇಷದ ಗುಪ್ತ ಕಾರ್ಯಾಚರಣೆ) ಕುರಿತು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಫೋಟಕ ಸಂಗತಿಗಳನ್ನು ಬಿಚ್ಚಿಟ್ಟಿದ್ದಾರೆ. ಉತ್ತರ ಭಾರತದ ಖಾಸಗಿ ಏಜೆನ್ಸಿಯೊಂದು ಬಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಚಿವರನ್ನು ಟ್ರ್ಯಾಪ್ ಮಾಡಲು ಯತ್ನಿಸಿತ್ತು ಎಂದು ಅವರು ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಚಿವ ಸಂಪುಟ ಸಭೆಯಲ್ಲಿ ನಡೆದ ಆಂತರಿಕ ಚರ್ಚೆಯ ವಿವರಗಳನ್ನು ಹಂಚಿಕೊಂಡರು. 'ಯಾರೋ ಉತ್ತರ ಭಾರತದವರು ಬಂದು ಡಿ.ಕೆ. ಶಿವಕುಮಾರ್ ಅವರ ಮೇಲೆಯೇ ಸ್ಟಿಂಗ್ ಆಪರೇಷನ್ ಮಾಡಲು ಯತ್ನಿಸಿದ್ದರು. 'ನನ್ನ



ಮೇಲೆಯೇ ಇಂತಹ ಪ್ರಯತ್ನ ನಡೆದಿದೆ ಎಂದ ಮೇಲೆ ನೀವೆಲ್ಲರೂ ಎಚ್ಚರಿಕೆಯಿಂದ ಇರಬೇಕು' ಎಂದು ಸ್ವತಃ ಶಿವಕುಮಾರ್ ಅವರು ಸಂಪುಟ ಸಭೆಯಲ್ಲಿ ಎಲ್ಲ ಸಚಿವರಿಗೆ ಮುನ್ನೆಚ್ಚರಿಕೆಯ ಸೂಚನೆ ನೀಡಿದ್ದಾರೆ' ಎಂದು ಸತೀಶ್ ಜಾರಕಿಹೊಳಿ ಹೇಳಿದರು.

**'ದೋಸೆ, ರಸಗುಲ್ಲಾ ತಂದಿಟ್ಟು ಬಾಯಲ್ಲಿ ನೀರೂರಿಸ್ತಾರೆ!'**

ಸ್ಟಿಂಗ್ ಆಪರೇಷನ್ ಕಾರ್ಯಾಚರಣೆಯ ಶೈಲಿಯನ್ನು ಸ್ವಾರಸ್ಯಕರವಾಗಿ ವಿವರಿಸಿದ ಸಚಿವರು, "ಟ್ರ್ಯಾಪ್ ಮಾಡಲು ಬರುವವರು ಸುಮ್ಮನೆ ಬರುವುದಿಲ್ಲ; ವಿವಿಧ ಆಮಿಷಗಳನ್ನು ತಂದಿಡುತ್ತಾರೆ. ಕೆಲವರು ರಸಗುಲ್ಲಾ, ಮೈಲಾರಿ ದೋಸೆ, ಮದ್ದೂರು ವಡೆ, ಮುಳಬಾಗಿಲು ದೋಸೆ, ದಾವಣಗೆರೆ ಬೆಣ್ಣೆ ದೋಸೆ ಹೀಗೆ ತಂದಿಡುತ್ತಾರೆ. ಇವುಗಳನ್ನು ನೋಡಿದಾಗ ಯಾರಿಗಾದರೂ ಬಾಯಲ್ಲಿ ನೀರು ಬರುವುದು ಸಹಜ. ಆ ಕ್ಷಣಕ್ಕೆ ಮರುಳಾಗಿ ಅನೇಕರು ಟ್ರ್ಯಾಪ್ ಆಗಿಬಿಡುತ್ತಾರೆ. ಹೀಗಾಗಿ ಯಾರೂ ಯಾವುದೇ ಆಮಿಷಗಳಿಗೆ ಬಲಿಯಾಗದೆ ಹುಷಾರಾಗಿರಬೇಕು ಎಂದು ಎಚ್ಚರಿಸಲಾಗಿದೆ. ರಾಜಕೀಯದಲ್ಲಿ ಇವೆಲ್ಲವೂ ಸಾಮಾನ್ಯ, ನಾವು ಎಚ್ಚರಿಕೆಯಿಂದಿರಬೇಕು" ಎಂದರು.

## ಸರ್ಕಾರಿ ಶಾಲೆಗಳಲ್ಲಿ ಓದಿದವರಿಗೆ ಗುಡ್ ನ್ಯೂಸ್: ವೃತ್ತಿಪರ ಶಿಕ್ಷಣದಲ್ಲಿ ಶೇ 7.5% ಮೀಸಲಾತಿ ಕಲ್ಪಿಸಿ ರಾಜ್ಯ ಸರ್ಕಾರ ಅಧಿಸೂಚನೆ!

**ಮುಸ್ಸಂಜೆ ಸಮಯ,**



ಬೆಂಗಳೂರು: ರಾಜ್ಯದ ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿನ ಸರ್ಕಾರಿ ಸೀಟುಗಳ ಹಂಚಿಕೆಯಲ್ಲಿ ಸರ್ಕಾರಿ ಶಾಲೆ ಹಾಗೂ ಪಿಯು ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿದ ಗ್ರಾಮೀಣ ಅಭ್ಯರ್ಥಿಗಳಿಗೆ ಬಿಗ್ ರಿಲೀಫ್ ಸಿಕ್ಕಿದೆ. ಸರ್ಕಾರಿ ಸಂಸ್ಥೆಗಳಲ್ಲಿ ಓದಿದ ವಿದ್ಯಾರ್ಥಿಗಳಿಗೆ ಶೇಕಡಾ 7.5ರಷ್ಟು ಸಮತಳ ಮೀಸಲಾತಿ ನೀಡುವ 'ಕರ್ನಾಟಕ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಸರ್ಕಾರಿ ಸೀಟುಗಳಿಗೆ ಅಭ್ಯರ್ಥಿಗಳ ಆಯ್ಕೆ (ತಿದ್ದುಪಡಿ) ನಿಯಮಗಳು, 2026'ರ ಅಧಿಕೃತ ಗಜೆಟ್ ಅಧಿಸೂಚನೆಯನ್ನು ಪ್ರಕಟಿಸಲಾಗಿದ್ದು, ಈ ನಿಯಮವು ತಕ್ಷಣದಿಂದಲೇ ಜಾರಿಗೆ ಬಂದಿದೆ.

ಹೊಸ ತಿದ್ದುಪಡಿ ನಿಯಮಗಳ ಪ್ರಕಾರ, ವೃತ್ತಿಪರ ಶಿಕ್ಷಣದಲ್ಲಿ ಗ್ರಾಮೀಣ ಕೋಟಾದಡಿ ಲಭ್ಯವಿರುವ ಒಟ್ಟು ಶೇ. 15ರಷ್ಟು ಮೀಸಲಾತಿಯಲ್ಲಿ ಈ ಹೊಸ ವಿಂಗಡನೆ ಮಾಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಸರ್ಕಾರಿ ಶಾಲೆಗಳು ಮತ್ತು ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಸತತವಾಗಿ ವ್ಯಾಸಂಗ ಮಾಡಿದ ಅರ್ಹ ಗ್ರಾಮೀಣ ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಶೇ. 7.5ರಷ್ಟು ಸೀಟುಗಳನ್ನು ಕಾಯ್ದಿರಿಸಲಾಗುತ್ತದೆ. ಇನ್ನು ಗ್ರಾಮೀಣ ಕೋಟಾದ ಉಳಿದ ಶೇ. 7.5ರಷ್ಟು ಮೀಸಲಾತಿಯನ್ನು ಗ್ರಾಮೀಣ ಪ್ರದೇಶಗಳಲ್ಲಿರುವ ಇತರ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳು ಅಥವಾ ಶಾಲೆಗಳಲ್ಲಿ 1 ರಿಂದ 10ನೇ ತರಗತಿಯವರೆಗೆ ಓದಿದ ಅಭ್ಯರ್ಥಿಗಳಿಗೆ ಮೀಸಲಿಡಲಾಗಿದೆ. ಸರ್ಕಾರದ ಈ ತೀರ್ಮಾನದಿಂದಾಗಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳಲ್ಲಿ ಓದಿದ ಬಡ ಹಾಗೂ ಅರ್ಹ ವಿದ್ಯಾರ್ಥಿಗಳಿಗೆ ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಾತಿಯಲ್ಲಿ ಹೆಚ್ಚಿನ ಆದ್ಯತೆ ಮತ್ತು ಅವಕಾಶಗಳು ಲಭ್ಯವಾಗಲಿವೆ.

## 'ನೊಣ ಕೊಲ್ಲಲು ಸುತ್ತಿಗೆ ಬಳಸ್ಬೇಡಿ': ದೆಹಲಿ ಮೆಟ್ರೋ ಬಂದ್ ಮಾಡಿದ ಕೇಂದ್ರಕ್ಕೆ ಸುಪ್ರೀಂ ತರಾಟೆ!

**ಮುಸ್ಸಂಜೆ ಸಮಯ,**

ನವದೆಹಲಿ : ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆಗೆ ಆಗ್ರಹಿಸಿ ಕಾಕ್ರೋಚ್ ಜನತಾ ಪಕ್ಷದ ಪ್ರತಿಭಟನೆಯ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಮೆಟ್ರೋ ಹಾಗೂ ರೈಲು ಸೇವೆಗಳನ್ನು ಸಂಪೂರ್ಣವಾಗಿ ನಿರ್ಬಂಧಿಸಿರುವುದನ್ನು ಸುಪ್ರೀಂ ಕೋರ್ಟ್ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ.

ಭದ್ರತೆಯ ಹೆಸರಿನಲ್ಲಿ ಸಾರ್ವಜನಿಕ ಸಾರಿಗೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದು ಲಕ್ಷಾಂತರ ಸಾಮಾನ್ಯ ನಾಗರಿಕರಿಗೆ ತೊಂದರೆ ಉಂಟುಮಾಡುವುದರಿಂದ ಇದು ಸಮರ್ಥನೀಯವಲ್ಲ ಎಂದು ನ್ಯಾಯಾಲಯ ಅಭಿಪ್ರಾಯಪಟ್ಟಿದೆ.

ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠವು, ಕಾನೂನುಬಾಹಿರ ಗುಂಪುಗೂಡುವಿಕೆಯನ್ನು ತಡೆಯಲು ಸಂಚಾರವನ್ನು ನಿಯಂತ್ರಿಸಬಹುದೇ ವಿನಃ ಇಡೀ ಸಾರಿಗೆ ವ್ಯವಸ್ಥೆಯನ್ನೇ ಸ್ಥಗಿತಗೊಳಿಸುವುದು ಸರಿಯಲ್ಲ ಎಂದು ಸ್ಪಷ್ಟಪಡಿಸಿದೆ. "ಒಂದು ನೊಣವನ್ನು ಕೊಲ್ಲಲು ಸುತ್ತಿಗೆ ಬಳಸಬಾರದು" ಎಂದು ಹೇಳಿರುವ ನ್ಯಾಯಾಲಯ, ಸೇವೆಗಳನ್ನು ಸಂಪೂರ್ಣವಾಗಿ



ನಿಷೇಧಿಸುವುದಕ್ಕೂ ಮತ್ತು ನಿಯಂತ್ರಿಸುವುದಕ್ಕೂ ಬಹಳ ವ್ಯತ್ಯಾಸವಿದೆ ಎಂದು ತಿಳಿಸಿದೆ.

ಎಲ್ಲಾ ನಾಗರಿಕರ ಬಳಿಯೂ ಖಾಸಗಿ ವಾಹನಗಳೋ ಅಥವಾ ಕಾರುಗಳೋ ಇರುವುದಿಲ್ಲ ಎಂಬುದನ್ನು ನೆನಪಿಸಿದ ನ್ಯಾಯಪೀಠ, ನಿತ್ಯ ಜೀವನೋಪಾಯಕ್ಕಾಗಿ ಸಂಚರಿಸುವ ಲಕ್ಷಾಂತರ ಜನಸಾಮಾನ್ಯರಿಗೆ ಇದರಿಂದ ಉಂಟಾಗುವ ತೊಂದರೆಯನ್ನು ಪ್ರಸ್ತಾಪಿಸಿತು. ಶುಕ್ರವಾರ ರಾತ್ರಿಯಿಂದಲೇ 57 ಮೆಟ್ರೋ ನಿಲ್ದಾಣಗಳನ್ನು ಮುಚ್ಚುವುದಾಗಿ ಘೋಷಿಸಿದ್ದ ಕ್ರಮಕ್ಕೆ ತೀವ್ರ ಅತೃಪ್ತಿ ವ್ಯಕ್ತಪಡಿಸಿತು.

ನ್ಯಾಯಾಲಯದ ಈ ಗಂಭೀರ ಸಲಹೆಯನ್ನು ಸ್ವೀಕರಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಪೊಲೀಸರ ನಿರ್ಬಂಧ ಕ್ರಮಗಳನ್ನು ಮರುಪರಿಶೀಲಿಸುವುದಾಗಿ ಭರವಸೆ ನೀಡಿದರು. ನಾಗರಿಕರಿಗೆ ಅನಾನುಕೂಲವಾಗದಂತೆ ಮೆಟ್ರೋ ಮತ್ತು ರೈಲು ಸೇವೆಗಳನ್ನು ನಿಯಂತ್ರಿತವಾಗಿ ಮುಂದುವರಿಸಲು ಸೂಕ್ತ ನಿರ್ಧಾರ ಕೈಗೊಳ್ಳುವಂತೆ ನ್ಯಾಯಾಲಯ ಕೇಂದ್ರ ಸರ್ಕಾರ ಹಾಗೂ ದೆಹಲಿ ಪೊಲೀಸರಿಗೆ ನಿರ್ದೇಶನ ನೀಡಿದೆ.

ಇದೇ ವೇಳೆ, ಶಾಂತಿಯುತ ಪ್ರತಿಭಟನೆಗಳಿಗೆ ಜಂತರ್ ಮಂತರ್ ಹೊರತುಪಡಿಸಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಪರ್ಯಾಯ ಸೂಕ್ತ ಸ್ಥಳವೊಂದನ್ನು ನಿಗದಿಪಡಿಸುವ ಕುರಿತು ಗಂಭೀರವಾಗಿ ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ.

## ಮೈಸೂರು ದಸರಾ ಮಹೋತ್ಸವ: ಬಿಗಿ ಭದ್ರತೆ; 6000ಕ್ಕೂ ಹೆಚ್ಚು ಪೊಲೀಸರ ನಿಯೋಜನೆ; ಮರ, ಕಟ್ಟಡಗಳ ಮೇಲೇರಿ ಜಂಬೂ ಸವಾರಿ ವೀಕ್ಷಣೆಗೆ ನಿಷೇಧ

**ಮುಸ್ಸಂಜೆ ಸಮಯ,**

ಮೈಸೂರು: ವಿಶ್ವ ವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದೆ. ಅರಮನೆ ನಗರಿ ಮೈಸೂರುನಲ್ಲಿ ದಸರಾ ಮಹೋತ್ಸವಕ್ಕೆ ಭರ್ಜರಿ ಸಿದ್ಧತೆಗಳು ನಡೆಯುತ್ತಿವೆ. ಈ ಬಾರಿಯ ದಸರಾ ಉತ್ಸವಕ್ಕೆ ಭದ್ರತೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಯಾವುದೇ ಅಹಿತಕರ ಘಟನೆ ನಡೆಯದಂತೆ ಹಾಗೂ ದಸರಾ ಮಹೋತ್ಸವ ಯಶಸ್ವಿಯಾಗಿ ನಡೆಯುವ ನಿಟ್ಟಿನಲ್ಲಿ 6000ಕ್ಕೂ ಹೆಚ್ಚು ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗಿದೆ.

ಶಿಥಿಲಗೊಂಡ ಕಟ್ಟಡ ಮತ್ತು ಮರಗಳಲ್ಲಿ ಕುಳಿತು ಜಂಬೂಸವಾರಿ ವೀಕ್ಷಣೆಗೆ ಈ ಬಾರಿ ನಿಷೇಧ ಹೇರಲಾಗಿದೆ. ಈ ಬಗ್ಗೆ ಮೈಸೂರು ನಗರ ಪೊಲೀಸ್ ಕಮಿಷನರ್? ಸೀಮಾ ಲಾಟ್ಕರ್ ಮಾಹಿತಿ ನೀಡಿದ್ದಾರೆ.

ಮಾಧ್ಯಮದವರೊಂದಿಗೆ ಮಾತನಾಡಿದ ಸೀಮಾ ಲಾಟ್ಕರ್, ಈ ಬಾರಿಯ ನಾಡ ಹಬ್ಬ ಮೈಸೂರು ದಸರಾಗೆ 5,161 ಸಿವಿಲ್ ಹಾಗೂ ಸಂಚಾರಿ ಪೊಲೀಸರು, 33 ಕೆಎಸ್‌ಆರ್‌ಪಿ ತುಕಡಿ, 25 ಡಿಎಆರ್ ತುಕಡಿ, 1500 ಹೋಮ್ ಗಾರ್ಡ್‌ಗಳು ಸೇರಿದಂತೆ ಆರು ಸಾವಿರಕ್ಕೂ ಹೆಚ್ಚು ಪೊಲೀಸರ ನಿಯೋಜನೆ ಮಾಡಲಾಗಿದೆ ಎಂದರು.

ದಸರಾದ 11 ದಿನ ಒಟ್ಟು 18 ಪೊಲೀಸ್ ಸಹಾಯ ಕೇಂದ್ರಗಳ ಸ್ಥಾಪನೆ ಮಾಡಲಾಗಿದ್ದು, ತುರ್ತು ಸಂದರ್ಭಗಳಲ್ಲಿ 112 ಸಹಾಯವಾಣಿ ಬಳಕೆ ಮಾಡಿಕೊಳ್ಳಬಹುದಾಗಿದೆ. ಇನ್ನು ಅರಮನೆ ಸುತ್ತಮುತ್ತ ಪ್ರಮುಖ ರಸ್ತೆಗಳಲ್ಲಿ ಏಕಮುಖ ಸಂಚಾರ ವ್ಯವಸ್ಥೆ ಇರಲಿದ್ದು, 35,794 ಸಿಸಿ ಕ್ಯಾಮರಾ ಮೂಲಕ ಸಾರ್ವಜನಿಕರ ಮೇಲೆ ಕಣ್ಗಾವಲು ಇರಲಿದೆ ಎಂದು ತಿಳಿಸಿರು.

ಮೈಸೂರು ದಸರಾದ ಪ್ರಮುಖ



ಆಕರ್ಷಣೆ ಎಂದರೆ ಜಂಬೂಸವಾರಿ ಕಣ್ತುಂಬಿಕೊಳ್ಳಲು ಜನರು ತುದಿಗಾಲಲ್ಲಿ ಕಾಯುತ್ತಿದ್ದಾರೆ. ಆದರೆ ಶಿಥಿಲಗೊಂಡಿರುವ ಕಟ್ಟಡ ಮತ್ತು ಮರಗಳ ಮೇಲೆ ಕುಳಿತು ಜಂಬೂಸವಾರಿ ವೀಕ್ಷಣೆಗೆ ನಿಷೇಧಿಸಲಾಗಿದೆ. ಈಗಾಗಲೇ 92 ಹಳೆಯ ಕಟ್ಟಡಗಳನ್ನು ಗುರುತು ಮಾಡಲಾಗಿದೆ. ಜೊತೆಗೆ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹಬ್ಬಿಸುವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು ಎಂದು ಖಡಕ್ ಎಚ್ಚರಿಕೆ ನಿಡಿದ್ದಾರೆ.

ಸಿಜೆಪಿ ಪ್ರತಿಭಟನೆ: ನಾಳೆ ಮುಂಜಾನೆ 4ಗಂಟೆಯಿಂದ ಮಧ್ಯಾಹ್ನ 2ರವರೆಗೆ ನವದೆಹಲಿ–ನಿಜಾಮುದ್ದೀನ್ ರೈಲುಗಳು ರದ್ದು

ಎಸ್ ಐಆರ್ ಅಕ್ರಮ ಖಂಡಿಸಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಪ್ರತಿಭಟನೆ ಹಿನ್ನೆಲೆಯಲ್ಲಿ ನವದೆಹಲಿ–ನಿಜಾಮುದ್ದೀನ್‌ಗೆ ತೆರಳುವ ರೈಲುಗಳು ನಾಳೆ ಮುಂಜಾನೆ 4 ಗಂಟೆಯಿಂದ ಮಧ್ಯಾಹ್ನ 2 ರವರೆಗೆ ರದ್ದಾಗಿವೆ. ಭಾರತೀಯ ರೈಲ್ವೆ ಅಕ್ಟೋಬರ್ 10 ರ ಶನಿವಾರ ನವದೆಹಲಿ ಮತ್ತು ಹಜರತ್ ನಿಜಾಮುದ್ದೀನ್ ನಿಲ್ದಾಣಗಳಿಗೆ ಬರುವ ಎಲ್ಲಾ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳನ್ನು ರದ್ದುಗೊಳಿಸಿದೆ. ಇಂಡಿಯನ್ ಎಕ್ಸ್‌ಪ್ರೆಸ್.ಕಾಮ್‌ಗೆ ಮಾತನಾಡಿದ ಹಿರಿಯ ರೈಲ್ವೆ ಅಧಿಕಾರಿಯೊಬ್ಬರು, ಈ ರೈಲು ನಿಲ್ದಾಣಗಳಲ್ಲಿನ ಎಲ್ಲಾ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲು ಸೇವೆಗಳು ಶನಿವಾರ ಬೆಳಿಗ್ಗೆ 4 ರಿಂದ ಮಧ್ಯಾಹ್ನ 2 ರವರೆಗೆ ರದ್ದಾಗಿರುತ್ತವೆ ಎಂದು ದೃಢಪಡಿಸಿದ್ದಾರೆ.

ವಿವರ ಪುಟ–4

## ವಿಶ್ವದ ಎದುರು ಭಾರತದ ನಿಲುವಿಗೆ ಸಿಕ್ತು ಜಯ, ರಷ್ಯಾ ಎದುರು ಡೀಸೆಲ್‌ಗಾಗಿ ಮಂಡಿಯೂರಿ ಟ್ರೋಲ್ ಆದ ಡೊನಾಲ್ಡ್ ಟ್ರಂಪ್

**ಮುಸ್ಸಂಜೆ ಸಮಯ,**

ಬೆಂಗಳೂರು: ರಷ್ಯಾದಿಂದ ಕಚ್ಚಾತೈಲ ಹಾಗೂ ಇಂಧನ ಆಮದು ಮಾಡಿಕೊಳ್ಳುವ ವಿಚಾರದಲ್ಲಿ ಭಾರತ ತಳೆದಿದ್ದ ಸ್ವತಂತ್ರ ಹಾಗೂ ರಾಷ್ಟ್ರೀಯ ಹಿತಾಸಕ್ತಿಯ ನಿಲುವೇ ಸರಿ ಎಂಬುದನ್ನು ಜಗತ್ತಿನ ಮುಂದೆ ಕಾಲವೇ ಸಾಬೀತುಪಡಿಸಿದೆ. ಈ ಹಿಂದೆ ರಷ್ಯಾದಿಂದ ತೈಲ ಖರೀದಿಸುತ್ತಿರುವ ಭಾರತ ಹಾಗೂ ಚೀನಾವನ್ನು ಗುರಿಯಾಗಿಸಿಕೊಂಡು ಸಾಲು ಸಾಲು ಭಾರಿ ಆರ್ಥಿಕ ಸುಂಕಗಳ ಬೆದರಿಕೆ ಒಡ್ಡಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಇದೀಗ ತಾವೇ ರಷ್ಯಾದಿಂದ ಬೃಹತ್ ಪ್ರಮಾಣದ ಡೀಸೆಲ್ ಇಂಧನವನ್ನು ಖರೀದಿಸಲು ನಿರ್ಧರಿಸುವ ಮೂಲಕ ಅಮೆರಿಕದ 'ಇಬ್ಬಂದಿ ನೀತಿ'ಯನ್ನು ಜಗತ್ತಿನೆದುರು ಬಹಿರಂಗಪಡಿಸಿದ್ದಾರೆ.

ಆ ಮೂಲಕ ರಷ್ಯಾದ ಎದುರ ಡೀಸೆಲ್‌ಗಾಗಿ ಮಂಡಿಯೂರಿ ಸೋಶಿಯಲ್ ಮೀಡಿಯಾದಲ್ಲಿ ಟ್ರೋಲ್‌ಗೆ ಒಳಗಾಗಿದ್ದಾರೆ.

ಅಮೆರಿಕದ ನಾಗರಿಕರಿಗೆ ಅಗ್ಗದ ದರದಲ್ಲಿ ಇಂಧನ ಪೂರೈಕೆ ಮಾಡುವ ಉದ್ದೇಶದಿಂದ ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ಇಂಧನ ಒಪ್ಪಂದ ಮಾಡಿಕೊಳ್ಳಲಾ ಗಿದ್ದು, ತಕ್ಷಣವೇ 3 ಲಕ್ಷ ಟನ್ ಡೀಸೆಲ್ ಅಮೆರಿಕಕ್ಕೆ ಪೂರೈಕೆಯಾಗಲಿದೆ ಎಂದು ಟ್ರಂಪ್ ಘೋಷಿಸಿದ್ದಾರೆ. ಬರಲಿರುವ ನವೆಂಬರ್‌ನಲ್ಲಿ 5 ಲಕ್ಷ ಟನ್, ತದನಂತರ 10 ಲಕ್ಷ ಟನ್ ಹಾಗೂ ಹಂತ ಹಂತವಾಗಿ ಬರೋಬ್ಬರಿ 30 ಲಕ್ಷ ಟನ್ (3 ಮಿಲಿಯನ್ ಟನ್) ಡೀಸೆಲ್ ಅನ್ನು ರಷ್ಯಾದಿಂದ ಅಮೆರಿಕ ಆಮದು ಮಾಡಿಕೊಳ್ಳಲಿದೆ.

**ಭಾರತದ ಮೇಲೆ ಸುಂಕದ ಗದಾಪ್ರಹಾರ ನಡೆಸಿದ್ದ ಟ್ರಂಪ್!**

ರಷ್ಯಾ–ಉಕ್ರೇನ್ ಸಂಘರ್ಷದ ಹಿನ್ನೆಲೆಯಲ್ಲಿ ಜುಲೈ 2025 ರಲ್ಲಿ, ರಷ್ಯಾದಿಂದ ಇಂಧನ ಖರೀದಿಸುವ ಯಾವುದೇ ದೇಶದ ಮೇಲಾದರೂ ಶೇ. 100 ರಷ್ಟು ದಂಡ ಸುಂಕ ವಿಧಿಸುವುದಾಗಿ ಟ್ರಂಪ್ ಎಚ್ಚರಿಕೆ ನೀಡಿದ್ದರು. ಅದರ ಬೆನ್ನಲ್ಲೇ, ಆಗಸ್ಟ್ 2025 ರಲ್ಲಿ ರಷ್ಯಾದಿಂದ ತೈಲ ಆಮದು ಮಾಡಿಕೊಳ್ಳುತ್ತಿದ್ದ ಭಾರತದ ಮೇಲೆ ಹೆಚ್ಚುವರಿ ಶೇ. 25 ರಷ್ಟು ಸುಂಕ ಹೇರಿದ್ದರು. ಇದರಿಂದಾಗಿ ಭಾರತದ ಮೇಲಿನ ಒಟ್ಟು ಅಮೆರಿಕನ್ ಸುಂಕ ಪ್ರಮಾಣ ಶೇ. 50 ಕ್ಕೆ ಏರಿಕೆಯಾಗಿತ್ತು.



ಆದರೆ, ಭಾರತೀಯ ಸಾರ್ವಜನಿಕರು ಮತ್ತು ದೇಶದ ಇಂಧನ ಭದ್ರತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭಾರತ ಸರ್ಕಾರ ರಷ್ಯಾದಿಂದ ತೈಲ ಖರೀದಿಸುವುದನ್ನು ಯಾವುದೇ ಕಾರಣಕ್ಕೂ ನಿಲ್ಲಿಸಲಿಲ್ಲ. ಇದರಿಂದ ಮತ್ತಷ್ಟು ಆಕ್ರೋಶಗೊಂಡ ಟ್ರಂಪ್, ಇದೇ ವರ್ಷ ಸೆಪ್ಟೆಂಬರ್ 18 ರಂದು ರಷ್ಯಾ ಇಂಧನ ಖರೀದಿಸುವ ದೇಶಗಳ ಮೇಲೆ ಗರಿಷ್ಠ ಶೇ. 100 ರಷ್ಟು ಸುಂಕ ವಿಧಿಸಲು ಅವಕಾಶ ನೀಡುವ ಹೊಸ ಕಾನೂನಿಗೆ ಅಂಕಿತ ಹಾಕಿದ್ದರು. ಭಾರತ ಮತ್ತು ಚೀನಾವನ್ನು ಕಡ್ಡಾಯವಾಗಿ ಗುರಿಯಾಗಿಸಿಕೊಂಡೇ ಈ ಕಾನೂನು ರೂಪಿಸಲಾಗಿತ್ತು ಎಂಬುದು ಸ್ಪಷ್ಟವಾಗಿತ್ತು.

**ಭಾರತದ ನಿಲುವು ತಾರ್ಕಿಕವಾಗಿ ಏನಾಗಿತ್ತು?**

ಭಾರತವು ತನಗೆ ಅಗತ್ಯವಿರುವ ಒಟ್ಟು ಕಚ್ಚಾತೈಲದ ಪೈಕಿ ಶೇ. 90 ರಷ್ಟನ್ನು ವಿದೇಶಗಳಿಂದಲೇ ಆಮದು ಮಾಡಿಕೊಳ್ಳುತ್ತದೆ. ಪ್ರಸ್ತುತ ಪರ್ಷಿಯನ್ ಕೊಲ್ಲಿಯ 'ಹಾರ್ಮುಜ್ ಜಲಸಂಧಿ' ಮಾರ್ಗದಲ್ಲಿ ಉದ್ವಿಗ್ನತೆ ಹೆಚ್ಚಿರುವುದರಿಂದ, ಭಾರತಕ್ಕೆ ಅಗತ್ಯವಿರುವ ಶೇ. 40 ಕ್ಕೂ ಹೆಚ್ಚು ಕಚ್ಚಾತೈಲವನ್ನು ರಷ್ಯಾವೇ ಪೂರೈಸುತ್ತಿದೆ. ದೇಶದ ರೈತರ ಟ್ರಾಕ್ಟರ್‌ಗಳಿಗೆ ಹಾಗೂ ಸರಕು ಸಾಗಣೆ ಲಾರಿಗಳ ಡೀಸೆಲ್ ಬೆಲೆ ದುಪ್ಪಟ್ಟಾಗಬಾರದು ಎನ್ನುವ ಏಕೈಕ ಕಾರಣಕ್ಕೆ ಭಾರತ ಸರ್ಕಾರ ರಷ್ಯಾದಿಂದ ಅಗ್ಗದ ದರದ ತೈಲವನ್ನು ಆಮದು ಮಾಡಿಕೊಳ್ಳುತ್ತಿತ್ತು.

ಅಮೆರಿಕಕ್ಕೆ ಒಂದು ನ್ಯಾಯ, ಭಾರತಕ್ಕಿನ್ನೊಂದು ನ್ಯಾಯವೇ?

ಭಾರತವು ತನ್ನ ದೇಶದ ಪ್ರಜೆಗಳ ಹಿತದೃಷ್ಟಿಯಿಂದ ರಷ್ಯಾದಿಂದ ತೈಲ ತಂದಾಗ, "ಭಾರತವು ಯುದ್ಧಕ್ಕೆ ಧನಸಹಾಯ ಮಾಡುತ್ತಿದೆ" ಎಂದು ಅಮೆರಿಕ ಮತ್ತು ಪಾಶ್ಚಿಮಾತ್ಯ ದೇಶಗಳು ಮಾತ್ರವಲ್ಲದೆ ಭಾರತದ ಕೆಲವು ನಾಯಕರುಗಳು ಬಹಿರಂಗವಾಗಿ ಉಪದೇಶ ನೀಡಿದ್ದವು. ಆದರೆ, ಈಗ ಅದೇ ಅಮೆರಿಕನ್ ಅಧ್ಯಕ್ಷ ಟ್ರಂಪ್ ತಮ್ಮ ದೇಶದ ಜನರಿಗೆ ಇಂಧನ ದರ ಕಡಿಮೆ ಮಾಡಲು ರಷ್ಯಾದಿಂದ ಡೀಸಲ್ ಖರೀದಿಸಿದಾಗ ಅದನ್ನು "ದೊಡ್ಡ ಆರ್ಥಿಕ ರಾಜತಾಂತ್ರಿಕ ಯಶಸ್ಸು" (ಉಡಿಜಚಿಣ ಆಜಚಿಟ) ಎಂದು ಬಿಂಬಿಸಲಾಗುತ್ತಿದೆ.

ಅಮೆರಿಕ ತನ್ನ ದೇಶದ ಪ್ರಜೆಗಳ ಹಿತ ಕಾಯಲು ಅಗ್ಗದ ಇಂಧನ ಖರೀದಿಸುವುದರಲ್ಲಿ ಯಾವುದೇ ತಪ್ಪಿಲ್ಲ. ಪ್ರತಿಯೊಬ್ಬ ರಾಷ್ಟ್ರ ನಾಯಕನೂ ತನ್ನ ದೇಶದ ಜನರ ಹಿತಾಸಕ್ತಿಯನ್ನು ಮೊದಲು ನೋಡಿಕೊಳ್ಳಬೇಕು. ಆದರೆ, ಭಾರತವೂ ತನ್ನದೇ ಪ್ರಜೆಗಳ ಹಿತಾಸಕ್ತಿಗಾಗಿ ಇದೇ ನಿರ್ಧಾರ ಕೈಗೊಂಡಾಗ ಅಮೆರಿಕ ನೈತಿಕ ಉಪದೇಶ ನೀಡುವುದು ಎಷ್ಟರ ಮಟ್ಟಿಗೆ ಸರಿ ಎನ್ನುವ ಪ್ರಶ್ನೆ ಇದೀಗ ಜಾಗತಿಕ ವಲಯದಲ್ಲಿ ಬಲವಾಗಿ ಚರ್ಚೆಗೆ ಗ್ರಾಸವಾಗಿದೆ.

## ರೋಗಿಗಳ ಜೀವ ಉಳಿಸುವ ವೈದ್ಯರಲ್ಲೇ ಹೆಚ್ಚುತ್ತಿದೆ ಖಿನ್ನತೆ; ಅಂತರರಾಷ್ಟ್ರೀಯ ಸಂಸ್ಥೆಗಳು ಅಲರ್ಟ್!

**ಮುಸ್ಸಂಜೆ ಸಮಯ,**

ಅಕ್ಟೋಬರ್ 10ರಂದು ಆಚರಿಸಲಾಗುವ ವಿಶ್ವ ಮಾನಸಿಕ ಆರೋಗ್ಯ ದಿನದ ಅಂಗವಾಗಿ, ವೈದ್ಯಕೀಯ ವೃತ್ತಿಯಲ್ಲಿರುವವರ ಮಾನಸಿಕ ಆರೋಗ್ಯ ಮತ್ತು ಕ್ಷೇಮದ ಬಗ್ಗೆ ಮುಕ್ತವಾಗಿ ಚರ್ಚಿಸುವ ವಾತಾವರಣವನ್ನು ಉತ್ತೇಜಿಸಲು ಭಾರತ ಮತ್ತು ಬ್ರಿಟನ್‌ನ ಆರು ಪ್ರಮುಖ ಮಾನಸಿಕ ಆರೋಗ್ಯ ಹಾಗೂ ವೈದ್ಯಕೀಯ ಸಂಸ್ಥೆಗಳು ಕೈಜೋಡಿಸಿವೆ.

'ಹ್ಯೂಮನೈಸಿಂಗ್ ಮೆಡಿಸಿನ್ ಇಂಡಿಯಾ ಇನಿಷಿಯೇಟಿವ್' ಎಂಬ ಹೆಸರಿನಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ವೈದ್ಯರು ಮತ್ತು ಇತರ ಆರೋಗ್ಯ ಸೇವಾ ವೃತ್ತಿಪರರ ಅನುಭವಗಳನ್ನು ಕೇಂದ್ರವಾಗಿಟ್ಟುಕೊಂಡು, ಅವರ ಮಾನಸಿಕ ಆರೋಗ್ಯ ಸಮಸ್ಯೆಗಳು ಹಾಗೂ ಕೆಲಸದ ಸ್ಥಳದಲ್ಲಿನ ಕ್ಷೇಮದ ಬಗ್ಗೆ ಗಮನಹರಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

**ಆರು ವೈದ್ಯಕೀಯ ಸಂಸ್ಥೆಗಳ ಸಹಭಾಗಿತ್ವ**

ಈ ಉಪಕ್ರಮದಲ್ಲಿ ಇಂಡಿಯಾ ಮೆಂಟಲ್ ಹೆಲ್ತ್ ಅಲಯನ್ಸ್, ಇಂಡಿಯನ್ ಸೈಕಿಯಾಟ್ರಿಕ್




ಸೊಸೈಟಿ, ಇಂಡಿಯನ್ ಟೀಚರ್ಸ್ ಆಫ್ ಸೈಕಿಯಾಟ್ರಿ, ವರ್ಲ್ಡ್ ಸೈಕಿಯಾಟ್ರಿಕ್ ಅಸೋಸಿಯೇಷನ್‌ನ ವಲಯ 15, ಬ್ರಿಟನ್‌ನ ಡರ್ಬಿಶೈರ್ ಹೆಲ್ತ್‌ಕೇರ್ ಎನ್‌ಎಚ್‌ಎಸ್ ಫೌಂಡೇಶನ್ ಟ್ರಸ್ಟ್ ಹಾಗೂ ಆಶಾ ಕೇರಳ ಸಂಸ್ಥೆಗಳು ಭಾಗಿಯಾಗಿವೆ.

ವೈದ್ಯರಲ್ಲಿ ಹೆಚ್ಚುತ್ತಿರುವ ಒತ್ತಡ, ಕೆಲಸದ ದಣಿವು (ಬರ್ನೌಟ್) ಮತ್ತು ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮ ಕೈಗೊಳ್ಳಲಾಗಿದೆ.

ಸಾಮಾನ್ಯವಾಗಿ ರೋಗಿಗಳಿಗೆ ಸಹಾಯ ಪಡೆಯುವಂತೆ ಸಲಹೆ ನೀಡುವ ವೈದ್ಯರು, ತಮ್ಮದೇ ಮಾನಸಿಕ ಒತ್ತಡದ ಬಗ್ಗೆ ಹೇಳಿಕೊಳ್ಳಲು ಹಿಂಜರಿಯುತ್ತಾರೆ. ವೃತ್ತಿಪರ ಗೌರವಕ್ಕೆ ಧಕ್ಕೆಯಾಗಬಹುದು ಎಂಬ ಆತಂಕ ಹಾಗೂ ಸಮಾಜದಲ್ಲಿನ ಕಳಂಕದ ಭಯ ಇದಕ್ಕೆ ಪ್ರಮುಖ ಕಾರಣಗಳಾಗಿವೆ ಎಂದು ಕಾರ್ಯಕ್ರಮದ ಆಯೋಜಕರು ತಿಳಿಸಿದ್ದಾರೆ.

ವಿವರ ಪುಟ–2

### ಮುಸ್ಸಂಜೆ ಮಾತು

ಜೀವನದಲ್ಲಿ ನಾವು ಎದುರಿಸುವ ಬಹುತೇಕ ಕಠಿಣ ಯುದ್ಧಗಳು ನಮ್ಮ ವಿರುದ್ಧ ಅಥವಾ ನಮ್ಮವರ ವಿರುದ್ಧವೇ ಆಗಿರುತ್ತವೆ.
–ಚಂದ್ರಶೇಖರ ಗುರೂಜಿ

### ಹುಟ್ಟುಹಬ್ಬದ ಶುಭಾಶಯಗಳು ಅಪ್ಪಾಜಿ



ಮುಸ್ಸಂಜೆ ಸಮಯ:
ನನ್ನ ಜಗತ್ತಿನ ಅತಿ
ದೊಡ್ಡ ಆಸ್ತಿ ನೀವೇ ಅಪ್ಪಾ,
ನನ್ನ ಬದುಕಿನ
ಮೊದಲ ಹೀರೋ ನೀವೇ ಅಪ್ಪಾ.

ನನಗೆ ನೋವೇ
ಬಾರದಂತೆ ಕಾಪಾಡಿದಿರಿ,
ನನ್ನ ಕಣ್ಣೀರಿಗೂ ಮುನ್ನ
ನನ್ನ ನೋವ ಅರೀತಿದೀರಿ

ನಿಮ್ಮ ಕನಸಿನಲ್ಲೂ
ಇರುವುದು ನಮ್ಮ ಸಂತೋಷ,
ನಿಮ್ಮ ಬದುಕಿನುದ್ದಕ್ಕೂ
ನಮಗಾಗಿ ನಿಮ್ಮ ಪರಿಶ್ರಮ.

ನಮ್ಮ ಕನಸೇ ನಿಮ್ಮ
ಕನಸು ಎಂದು ಬದುಕಿದಿರಿ,
ನಿಮ್ಮ ಆಸೆಗಳಿಗಿಂತ
ನಮ್ಮ ಆಸೆಗಳಿಗೆ ಬೆಲೆ ಕೊಟ್ಟಿರಿ.

ನಾನು ಎಷ್ಟೇ ದೊಡ್ಡವಳಾದರೂ
ನಿಮ್ಮ ಮಗಳೇ,
ನಿಮ್ಮ ಪ್ರೀತಿಗೆ ಸದಾ ಪುಟ್ಟ ಮಗುವೇ.

ನನ್ನ ಸೋಲಿನಲ್ಲಿ ಧೈರ್ಯ
ತುಂಬುವ ಶಕ್ತಿ ನೀವೇ,
ನನ್ನ ಗೆಲುವಿನಲ್ಲಿ
ಹೆಮ್ಮೆಪಡುವ ಜೀವ ನೀವೇ.

ನಿಮ್ಮ ಮುಖದ
ನಗು ಎಂದಿಗೂ ಮಾಸದಿರಲಿ,
ನಿಮ್ಮ ಬಾಳಲ್ಲಿ ನೋವಿನ
ನೆರಳೂ ಸುಳಿಯದಿರಲಿ.

ನೀವು ಕಂಡ ಕನಸುಗಳೆಲ್ಲ
ನನಸಾಗಲಿ, ನಿಮ್ಮ ಪ್ರತಿದಿನವೂ
ಸಂತೋಷದಿಂದ ತುಂಬಿರಲಿ.

ದೇವರಲ್ಲಿ ಬೇಡುವುದು ಒಂದೇ ನಾನು
ಸಾಯವರೆಗೂ ನಮ್ಮ ಅಪ್ಪ ಅಮ್ಮ
ಚೆನ್ನಾಗಿ ಇರಬೇಕು ಎಂದು

ನಿಮ್ಮ ಮಗಳಾಗಿ
ಹುಟ್ಟಿದ ನನ್ನ ಜನ್ಮ ಸಾರ್ಥಕ,
ನಿಮ್ಮ ಪ್ರೀತಿ ಪಡೆದ
ನನ್ನ ಬದುಕು ಸದಾ ಸುಂದರ

ಮತ್ತೊಮ್ಮೆ ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು ಅಪ್ಪಾಜಿ!

–ರಕ್ಷಿತ ವಸಂತ್

### ವಿಶ್ವ ಮಾನಸಿಕ ಆರೋಗ್ಯ ದಿನದ ವಿಶೇಷ ಕವಿತೆ : ಮನಸ್ಸು / ಆರೋಗ್ಯ

ಮುಸ್ಸಂಜೆ ಸಮಯ:
ದೈಹಿಕ ಕಾಯಿಲೆಗಳಿಲ್ಲದಿರುವುದೇ
ದೇಹದ ಆರೋಗ್ಯ ।
ಮಾನಸಿಕ ಕಾಯಿಲೆಗಳಿಲ್ಲದಿರುವುದೇ
ಮನಸ್ಸಿನ ಆರೋಗ್ಯ ।
ಧನಾತ್ಮಕ ಚಿಂತನೆ, ಇಚ್ಛಾ ಶಕ್ತಿಯೇ
ಭಾವನಾತ್ಮಕ ಅರೋಗ್ಯ ।
ನಕರಾತ್ಮಕ ಚಿಂತನೆ, ಒತ್ತಡಗಳಿಲ್ಲದಿರುವುದೇ
ಸ್ವಸ್ತ ಮಾನಸಿಕ ಆರೋಗ್ಯ ।
ದೇಹ ಮತ್ತು ಮನಸ್ಸಿನ
ಸಮ ಸ್ಥಿತಿಯೇ ಆರೋಗ್ಯ ।
ಒತ್ತಡ, ಚಿಂತೆಗಳು ತರುವು ಅನಾರೋಗ್ಯ ।
ಜೀವನ ಶೈಲಿಯ
ಕೊರತೆಯಿಂದ ರೋಗಗಳು ।
ಅಪೌಷ್ಟಿಕತೆಯೇ ದೈಹಿಕ ರೋಗಗಳು ।
ಚಿಂತೆಯು ಮನಸು ಸುಡುವ ಚಿತೆ ।
ಅಶಾಂತಿ ಅಲ್ಲೋಲ ಕಲ್ಲೋಲಗಳೇ
ಮಾನಸಿಕ ವ್ಯಥೆ ।
ದೇಹ ಮನಸ್ಸು ಒಂದೇ
ನಾಣ್ಯದ ಎರಡು ಮುಖಗಳು ।
ಅಶಾಂತಿ, ರೋಗ ರುಜಿನಗಳೇ
ಜೀವನದ ಬಾದೆಗಳು ।
ಸಂತೋಷದಿಂದಿದ್ದರೆ ನೂರು ವರುಷ ।
ಸದಾ ಚಿಂತೆಯಿಂದಿದ್ದರೆ ಮೂರೇ ವರುಷ ।
ಯೋಗ, ಧ್ಯಾನಗಳಿಂದ ಅರೋಗ್ಯ ವೃದ್ಧಿ ।
ಸದಾ ಆರೋಗ್ಯವೇ ಎಲ್ಲರದಾಗಲಿ ಸುದ್ದಿ /



ಡಾ.ಸತ್ಯಮೂರ್ತಿ ಗೂಗಿ, ಬೆಂಗಳೂರು

ಮುಸ್ಸಂಜೆ ಸಮಯ
10 ಶನಿವಾರ ಅಕ್ಟೋಬರ್ 2026
10 Saturday Octo. 2026

# ಮೇಲ್ನೋಟಕ್ಕೆ ಇದು ಆತುರದ ದೂರು: ಬೂತ್ ಏಜೆಂಟರ ವಿರುದ್ಧದ ಎಫ್‌ಐಆರ್‌ಗಳಿಗೆ ಹೈಕೋರ್ಟ್ ಮಧ್ಯಂತರ ತಡೆ

**ಮುಸ್ಸಂಜೆ ಸಮಯ,**

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (SIR) ವೇಳೆ ಫಾರಂ 7 ದುರ್ಬಳಕೆ ಮಾಡಿಕೊಂಡು ಅಕ್ರಮವಾಗಿ ಹೆಸರುಗಳನ್ನು ತೆಗೆದುಹಾಕಲು ಯತ್ನಿಸಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿದ್ದ ಎಫ್‌ಐಆರ್ (FIR) ತನಿಖೆಗೆ ಕರ್ನಾಟಕ ಹೈಕೋರ್ಟ್ (High Court) ಮಧ್ಯಂತರ ತಡೆಯಾಜ್ಞೆ ನೀಡಿ ಆದೇಶಿಸಿದೆ.

ಪ್ರಕರಣದ ಪ್ರಾಥಮಿಕ ವಿಚಾರಣೆ ನಡೆಸಿದ ನ್ಯಾಯಪೀಠವು, ಪೊಲೀಸರು ಕೈಗೊಂಡಿರುವ ಈ ಕ್ರಮ ಹಾಗೂ ದಾಖಲಾಗಿರುವ ದೂರು ಮೇಲ್ನೋಟಕ್ಕೆ ಅತ್ಯಂತ ಆತುರದಿಂದ ಕೂಡಿದೆ ಎಂದು ಗಂಭೀರ ಅಭಿಪ್ರಾಯ ವ್ಯಕ್ತಪಡಿಸಿದೆ.

**ಏನಿದು ಪ್ರಕರಣ?**

ಇತ್ತೀಚೆಗೆ ಕಾಂಗ್ರೆಸ್ ನಾಯಕ ಅನೂಪ್ ಅಯ್ಯಂಗಾರ್ ನೀಡಿದ ದೂರಿನನ್ವಯ ಬೆಂಗಳೂರಿನ ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಮಲ್ಲೇಶ್ವರಂ ಕ್ಷೇತ್ರದ ಬಿಜೆಪಿ ಬೂತ್ ಏಜೆಂಟ್‌ಗಳಾದ ವಸಂತಲಕ್ಷ್ಮಿ ಮತ್ತು ದೀಪಕ್ ಸಿಂಗ್ ವಿರುದ್ಧ ಪ್ರಜಾಪ್ರಾತಿನಿಧ್ಯ ಕಾಯ್ದೆ ಹಾಗೂ ಇತರೆ ವಿಭಾಗಗಳಡಿ ಎಫ್‌ಐಆರ್ ದಾಖಲಿಸಲಾಗಿತ್ತು. ತಮ್ಮ ವಿರುದ್ಧ ದಾಖಲಾಗಿರುವ ಈ ಎಫ್‌ಐಆರ್ ಅನ್ನು ರದ್ದುಗೊಳಿಸಬೇಕೆಂದು ಕೋರಿ ಇಬ್ಬರೂ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಶುಕ್ರವಾರ ಈ ಅರ್ಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಮೂರ್ತಿ ಅನಂತ್ ರಾಮನಾಥ್ ಹೆಗ್ಡೆ ಅವರಿದ್ದ ಏಕಸದಸ್ಯ ಪೀಠವು ದೂರುದಾರರು ಹಾಗೂ ಸರ್ಕಾರದ ವಾದ–ಪ್ರತಿವಾದ ಆಲಿಸಿದ ಬಳಿಕ ಎಫ್‌ಐಆರ್ ಮುಂದಿನ ಪ್ರಕ್ರಿಯೆಗೆ ಮಧ್ಯಂತರ ತಡೆಯಾಜ್ಞೆ ವಿಧಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಿರಿಯ ವಕೀಲ ಅರುಣ್ ಶ್ಯಾಮ್ ವಾದ ಮಂಡಿಸಿ, ಬಿಎಲ್‌ಎ (ಬೂತ್ ಮಟ್ಟದ ಏಜೆಂಟ್) ಆಗಿ ಸಾರ್ವಜನಿಕರ ಮಾಹಿತಿಯನ್ನಾಧರಿಸಿ ಮತದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಲು ಫಾರಂ 7 ಅರ್ಜಿಗಳನ್ನು ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿದೆ. ಈ ಅರ್ಜಿಗಳ ನೈಜತೆಯನ್ನು ಪರಿಶೀಲಿಸಿ ಅಂತಿಮ ತೀರ್ಮಾನ ಕೈಗೊಳ್ಳುವ




ಸಂಪೂರ್ಣ ಅಧಿಕಾರ ಚುನಾವಣಾ ಆಯೋಗ ಮತ್ತು ಸಂಬಂಧಪಟ್ಟ ನಿಯೋಜಿತ ಅಧಿಕಾರಿಗಳಿಗಿರುತ್ತದೆ.

ಅರ್ಜಿ ಸಲ್ಲಿಸಿದ್ದನ್ನೇ ಅಪರಾಧ ಎಂದು ಪರಿಗಣಿಸಿ ಎಫ್‌ಐಆರ್ ಹಾಕಿರುವುದು ಕಾನೂನುಬಾಹಿರ ಎಂದು ನ್ಯಾಯಪೀಠಕ್ಕೆ ವಿವರಿಸಿದರು. ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಹೆಚ್ಚುವರಿ ವಿಶೇಷ ಸರ್ಕಾರಿ ಅಭಿಯೋಜಕ ಅನೂಪ್ ಕುಮಾರ್, ಸಾಮಾನ್ಯ ನಿಯಮದಂತೆ ಒಬ್ಬರು ಕೆಲವೇ ಅರ್ಜಿಗಳನ್ನು ಸಲ್ಲಿಸಬಹುದು, ಆದರೆ ಅರ್ಜಿದಾರರು ಬರೋಬ್ಬರಿ 778 ಫಾರಂ 7 ಅರ್ಜಿಗಳನ್ನು ಸಲ್ಲಿಸಿ ದುರುದ್ದೇಶ ಪೂರ್ವಕವಾಗಿ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಲು ಯತ್ನಿಸಿದ್ದಾರೆ ಎಂದು ವಾದಿಸಿದರು.

**ಅರ್ಜಿದಾರರನ್ನ ತರಾಟೆಗೆ ತೆಗೆದುಕೊಂಡ ಕೋರ್ಟ್**

ಸರ್ಕಾರದ ವಾದವನ್ನು ಆಲಿಸಿದ ನ್ಯಾಯಮೂರ್ತಿಗಳು ಕಠಿಣ ಪ್ರಶ್ನೆಗಳ ಸುರಿಮಳೆಯನ್ನೇ ಗೈದರು. ಒಬ್ಬ ವ್ಯಕ್ತಿ 50ಕ್ಕೂ ಹೆಚ್ಚು ಫಾರಂ 7 ಅರ್ಜಿಗಳನ್ನು ಸಲ್ಲಿಸಿದರೆ ಅದು ಯಾವ ಕಾನೂನು ಅಥವಾ ಕಾಯ್ದೆಯಡಿ ಅಪರಾಧವಾಗುತ್ತದೆ ಎಂದು ನೇರವಾಗಿ ಪ್ರಶ್ನಿಸಿದರು.

ಯಾರಾದರೂ ಫಾರಂ 7 ಸಲ್ಲಿಸಿದ ತಕ್ಷಣವೇ ಮತದಾರರ ಹೆಸರು ಡಿಲೀಟ್ ಆಗುವುದಿಲ್ಲ, ಆ ಕುರಿತು ಚುನಾವಣಾ ಅಧಿಕಾರಿಗಳು ವಿಚಾರಣೆ ನಡೆಸುವುದಿಲ್ಲವೇ? ತಪ್ಪು ಅರ್ಜಿಗಳಾಗಿದ್ದರೆ ಅಧಿಕಾರಿಗಳೇ ಅವುಗಳನ್ನು ಪುರಸ್ಕರಿಸದೆ ವಜಾಗೊಳಿಸುವ ಅಧಿಕಾರ ಹೊಂದಿಲ್ಲವೇ? ಹಾಗೂ ಹೆಸರು ತೆಗೆದುಹಾಕಲ್ಪಡುವ ಮತದಾರರಿಗೆ ಪೂರ್ವಭಾವಿ ನೋಟಿಸ್ ನೀಡಿ ಸ್ಪಷ್ಟನೆ ಕೇಳಲಾಗುವುದಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.

ಅಲ್ಲದೆ, ಮತದಾರರು ನಿರ್ದಿಷ್ಟವಾಗಿ ಯಾರಿಗೆ ಮತ ಚಲಾಯಿಸುತ್ತಾರೆ ಎಂಬುದು ಗೌಪ್ಯವಾಗಿರುತ್ತದೆ ಹಾಗಿರುವಾಗ ದುರುದ್ದೇಶ ಹೇಗೆ ಸಾಬೀತಾಗುತ್ತದೆ ಎಂದು ಪ್ರಶ್ನಿಸಿದ ಹೈಕೋರ್ಟ್, ಈ ಹಂತದಲ್ಲಿ ಎಫ್‌ಐಆರ್ ದಾಖಲಿಸಿರುವುದು ಆತುರದ ನಿರ್ಧಾರ ಎಂದು ಸ್ಪಷ್ಟಪಡಿಸಿ ತಡೆಯಾಜ್ಞೆ ನೀಡಿತು.

# KPSC SCAM: ಕೆಪಿಎಸ್‌ಸಿ ಪಶುವೈದ್ಯಕೀಯ ನೇಮಕಾತಿ ಹಗರಣದಲ್ಲಿ 'CDR' ಸ್ಫೋಟ!

**ಮುಸ್ಸಂಜೆ ಸಮಯ,**

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗದ (KPSC Scam) ಪಶುವೈದ್ಯಕೀಯ ಅಧಿಕಾರಿಗಳ ನೇಮಕಾತಿ ಪರೀಕ್ಷೆಯ ಅಕ್ರಮ ಮತ್ತು ಹಗರಣದ ತನಿಖೆ ತೀವ್ರಗೊಳ್ಳುತ್ತಿದ್ದು, ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕೆಪಿಎಸ್‌ಸಿ ಸದಸ್ಯೆ ಗೀತಾ (Geetha) ಅವರು ಸಿಕ್ಕಿಬಿದ್ದ ರಹಸ್ಯ ತನಿಖಾ ಸಂಸ್ಥೆಗಳ ಮೂಲಗಳಿಂದ ಹೊರಬಿದ್ದಿದೆ.

ಜಾರಿ ನಿರ್ದೇಶನಾಲಯ (ED) ನಡೆಸಿದ ಸುದೀರ್ಘ ತನಿಖೆ ಹಾಗೂ ಸಾಕ್ಷ್ಯಾಧಾರಗಳ ಸಂಗ್ರಹದ ವೇಳೆ, ಕಾಲ್ ಡಿಟೇಲ್ಸ್ ರೆಕಾರ್ಡ್ (CDR) ವರದಿ ಹಾಗೂ ಆರೋಪಿ ಬಳಸುತ್ತಿದ್ದ ಕೆಂಪು ಬಣ್ಣದ ಕಾರು ಈ ಇಡೀ ಭ್ರಷ್ಟಾಚಾರದ ಜಾಲವನ್ನು ಬಿಚ್ಚಿಡುವಲ್ಲಿ ಪ್ರಮುಖ ಕೊಂಡಿಯಾಗಿದ್ದವು ಎಂಬ ಸತ್ಯ ಬಹಿರಂಗಗೊಂಡಿದೆ.

**ಅಭ್ಯರ್ಥಿ ನೀಡಿದ ಹೇಳಿಯಿಂದ ಇಡಿಗೆ ಸಿಕ್ಕಿದ ಸಾಕ್ಷಿ :** ಈ ಬೃಹತ್ ಅಕ್ರಮದ ತನಿಖೆ ವೇಳೆ ಅಭ್ಯರ್ಥಿಯೊಬ್ಬರು ನೀಡಿದ ಸ್ಫೋಟಕ ಹೇಳಿಕೆಯಿಂದ ಇಡಿ ಅಧಿಕಾರಿಗಳಿಗೆ ಬಲವಾದ ಸಾಕ್ಷ್ಯ ದೊರಕಿತ್ತು. ಪಶುವೈದ್ಯಕೀಯ ಹುದ್ದೆಗೆ ಅರ್ಜಿ ಸಲ್ಲಿಸಿದ ನಂತರ, ಹಲವು ಮಧ್ಯವರ್ತಿಗಳು ಲಂಚ ನೀಡಿ ಹುದ್ದೆ ಗಿಟ್ಟಿಸಿಕೊಳ್ಳುವಂತೆ ಅಭ್ಯರ್ಥಿಗಳನ್ನು ಸಂಪರ್ಕಿಸಲು ಯತ್ನಿಸಿದ್ದರು. ಇದೇ ರೀತಿ ನಂದೀಶ್ ಎಂಬ ಅಭ್ಯರ್ಥಿಯನ್ನೂ ಮಧ್ಯವರ್ತಿಗಳು ಸಂಪರ್ಕಿಸಿ ಹಣದ ಬೇಡಿಕೆ ಇಟ್ಟಿದ್ದರು. ಆದರೆ, ಆರಂಭದಲ್ಲಿ ಅಕ್ರಮವಾಗಿ ಹಣ ನೀಡಿ ಕೆಲಸ ಪಡೆಯಲು ನಿರಾಕರಿಸಿದ್ದ ನಂದೀಶ್‌ಗೆ, ಕಾಲಕ್ರಮೇಣ ನೇರವಾಗಿ ಕೆಪಿಎಸ್‌ಸಿ ಸದಸ್ಯೆ ಗೀತಾ ಅವರ ಸಂಪರ್ಕ ಸಿಕ್ಕಿತ್ತು ಎಂದು ವಿಚಾರಣೆ ವೇಳೆ ನಂದೀಶ್ ಸತ್ಯ ಬಾಯ್ಬಿಟ್ಟಿದ್ದ.



ಆತನ ಈ ಹೇಳಿಕೆಯನ್ನು ಆಧರಿಸಿ ಕಾರ್ಯಪ್ರವೃತ್ತರಾದ ಇಡಿ ಅಧಿಕಾರಿಗಳು ನಂದೀಶ್ ಅವರ ಮೊಬೈಲ್ ಕಾಲ್ ರೆಕಾರ್ಡ್ ಡೀಟೇಲ್ಸ್ (CDR) ಪರಿಶೀಲಿಸಿದಾಗ, ಸದಸ್ಯೆ ಗೀತಾ ಅವರೊಂದಿಗಿನ ಸಂಪರ್ಕ ಹಾಗೂ ಸಂಭಾಷಣೆಯ ಆಧಾರಗಳು ಒಂದೊಂದಾಗಿ ಲಭ್ಯವಾದವು. ಇನ್ನು ಈ ಡೀಲ್ ಕುದುರಿಸಲು ಮತ್ತು ಹಣ ಪಡೆಯಲು ಗೀತಾ ಅವರು ರಾಜಮಹಲ್ ವ್ಯಾಪ್ತಿಯ ನಿರ್ಜನ ಪ್ರದೇಶವೊಂದರಲ್ಲಿ ನಂದೀಶ್ ಅವರನ್ನು ಭೇಟಿಯಾಗಿದ್ದರು. ಆ ಸಮಯಕ್ಕೆ ಅವರು ಬಂದಿದ್ದ ಕೆಂಪು ಬಣ್ಣದ ಕಾರು ಮತ್ತು ಆ ನಿರ್ದಿಷ್ಟ ಸ್ಥಳದ ಟವರ್ ಲೊಕೇಶನ್ ಸಿಡಿಆರ್ ತನಿಖೆಯಲ್ಲಿ ನಿಖರವಾಗಿ ತಾಳೆಯಾಗಿತ್ತು.

**ಅಧಿಕಾರಿಗಳ ಮುಖಾಮುಖಿ ವಿಚಾರಣೆ**

ಆರಂಭಿಕ ವಿಚಾರಣೆ ವೇಳೆ ಅಧಿಕಾರಿಗಳು ಪ್ರಶ್ನಿಸಿದಾಗ, ತಮ್ಮ ಮೇಲಿನ ಎಲ್ಲಾ ಆರೋಪಗಳನ್ನು ಗೀತಾ ಸಸಾರವಾಗಿ ತಳ್ಳಿಹಾಕಿದ್ದರು. ಆದರೆ, ಸಿಡಿಆರ್ ವರದಿ, ಮೊಬೈಲ್ ಟವರ್ ಲೊಕೇಶನ್‌ಗಳು ಮತ್ತು ಕೆಂಪು ಕಾರಿನಲ್ಲಿ ನಡೆದ ಭೇಟಿಯ ಭೌತಿಕ ಸಾಕ್ಷ್ಯಗಳನ್ನು ಮುಂದಿಟ್ಟು ಪ್ರಶ್ನಿಸಿದಾಗ ಅಧಿಕಾರಿಗಳ ಮುಂದೆ ಉತ್ತರವಿಲ್ಲದೆ ಗೀತಾ ಬಲೆಗೆ ಬಿದ್ದರು.

ಈ ಭದ್ರ ಸಾಕ್ಷ್ಯಗಳ ಆಧಾರದ ಮೇಲೆ ಕೆಪಿಎಸ್‌ಸಿ ಸದಸ್ಯೆ ಗೀತಾರನ್ನು ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಅಧಿಕೃತವಾಗಿ ಬಂಧಿಸಿದ್ದಾರೆ. ಪ್ರಸ್ತುತ ಇಡಿ ಕಸ್ಟಡಿಯಲ್ಲಿರುವ ಮತ್ತೊಬ್ಬ ಆರೋಪಿ ಶಿವಶಂಕರಪ್ಪ ಹಾಗೂ ಗೀತಾ ಅವರನ್ನು ಮುಖಾಮುಖಿ ಕುಳ್ಳಿರಿಸಿ ಇಡಿ ಅಧಿಕಾರಿಗಳು ತೀವ್ರ ವಿಚಾರಣೆ ಮುಂದುವರಿಸಿದ್ದಾರೆ.

# ಸೊಪ್ಪು ಸದೆ ಗೊತ್ತಿಲ್ಲ ನಾನು ಈ ಸ್ಟಿಂಗ್ ರಾಜಕೀಯದಲ್ಲಿ ಎಲ್ ಬೋರ್ಡ್ ಇದ್ದಂತೆ: 50 ವರ್ಷದ ರಾಜಕಾರಣದಲ್ಲಿ ಇಂತಹ ಅಸಹ್ಯ ನೋಡಿಲ್ಲ– ಸಚಿವ ವಿ ಸೋಮಣ್ಣ ಆಕ್ರೋಶ

**ಮುಸ್ಸಂಜೆ ಸಮಯ,**

ಬೆಂಗಳೂರು: ರಾಜ್ಯ ರಾಜಕಾರಣವನ್ನು ತಲ್ಲಣಗೊಳಿಸಿರುವ ಸ್ಟಿಂಗ್ ಆಪರೇಷನ್ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ವಿ ಸೋಮಣ್ಣ ಅವರು ಕಿಡಿಕಾರಿದ್ದಾರೆ. ನಾನು ಈ ಸ್ಟಿಂಗ್ ಪಾಲಿಟಿಕ್ಸ್ ನಲ್ಲಿ ಎಲ್ ಬೋರ್ಡ್ ಇದ್ದಂತೆ ಎಂದು ಹೇಳುವ ಮೂಲಕ ತಮ್ಮ ಆಕ್ರೋಶ ಹೊರಹಾಕಿದ್ದಾರೆ.

ರಾಜಕೀಯದಲ್ಲಿ ಇಂತಹ ಕೆಟ್ಟ ಸಂಸ್ಕೃತಿ ಇರುವುದು ದೇಶದ ದುರಂತ ಎಂದು ಬಣ್ಣಿಸಿದ ಅವರು, ಇಂತಹ ಕುತಂತ್ರಗಳ ಬಗ್ಗೆ ತಮಗೆ ಏನೂ ಗೊತ್ತಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

**ನನ್ನ ನಂತರವೇ ಡಿ ಕೆ ಶಿವಕುಮಾರ್ ರಾಜಕೀಯಕ್ಕೆ ಬಂದವರು ಸೋಮಣ್ಣ ನೆನಪು**

ಸುದ್ದಿಗಾರರೊಂದಿಗೆ ಮಾತನಾಡಿದ ಸೋಮಣ್ಣ, ಸಾರ್ವಜನಿಕ ಜೀವನದಲ್ಲಿ ತಮ್ಮ ಸುದೀರ್ಘ ಪಯಣವನ್ನು ನೆನಪಿಸಿಕೊಂಡರು. ನಾನು ರಾಜಕೀಯಕ್ಕೆ ಬಂದು 50 ವರ್ಷಗಳಾಗಿವೆ. ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರು ಕೂಡ ನನ್ನ ನಂತರವೇ ಈ ಕ್ಷೇತ್ರಕ್ಕೆ ಬಂದವರು. ನಮಗೆ ಜನಸೇವೆ ಗೊತ್ತಿದೆಯೇ ಹೊರತು ಇಂತಹ ಬೆನ್ನಿಗೆ ಚೂರಿ ಹಾಕುವ ಕೆಲಸಗಳಲ್ಲ. ಈ ಸ್ಟಿಂಗ್ ಆಪರೇಷನ್‌ಗಳ ಪಿತಾಮಹ ಯಾರು ಎಂಬುದು ನನಗೆ ತಿಳಿದಿಲ್ಲ. ಈ ಬಗ್ಗೆ ಯಾರು ಮಾತನಾಡುತ್ತಿದ್ದಾರೋ ಅವರನ್ನೇ ಹೋಗಿ ಕೇಳಿ, ನನ್ನ ಬಳಿ ಇಂತಹ ಅಸಹ್ಯಕರ ವಿಚಾರಗಳ ಚರ್ಚೆ ಬೇಡ ಎಂದು ಅವರು ಖಾರವಾಗಿ ಪ್ರತಿಕ್ರಿಯಿಸಿದರು.

**ಸುಳ್ಳನ್ನು ಸತ್ಯ ಮಾಡುವ ಪ್ರಜ್ಞಾಹೀನ ವ್ಯವಸ್ಥೆ ಪಾಪದ ಕೆಲಸ**

ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿಯ ಬಗ್ಗೆ ಬೇಸರ ವ್ಯಕ್ತಪಡಿಸಿದ ಸೋಮಣ್ಣ, ಇಲ್ಲದಿರುವುದನ್ನು ಸೃಷ್ಟಿಸಿ ಜನರ ಹಾದಿ ತಪ್ಪಿಸುತ್ತಿರುವ ಈ ವ್ಯವಸ್ಥೆಯು ಅತ್ಯಂತ ಪಾಪದ



ಕೆಲಸ ಮಾಡುತ್ತಿದೆ ಎಂದು ಟೀಕಿಸಿದರು. ಏಳು ಕೋಟಿ ಕನ್ನಡಿಗರನ್ನು ಪ್ರತಿನಿಧಿಸುವ ಮುಖ್ಯಮಂತ್ರಿ ಕುರ್ಚಿಯ ಮೇಲೆ ಕುಳಿತು ಇಂತಹ ವಿಷಯಗಳಲ್ಲಿ ತೊಡಗುವುದು ಅಥವಾ ಅಂತಹ ವಾತಾವರಣ ಸೃಷ್ಟಿಸುವುದು ತಪ್ಪು ಮತ್ತು ಖಂಡನೀಯ. ಪ್ರಜಾಪ್ರಭುತ್ವದಲ್ಲಿ ನೈತಿಕತೆ ಮುಖ್ಯ ಎಂದು ಅವರು ಪ್ರತಿಪಾದಿಸಿದರು.

**ಬರಗಾಲದ ನಡುವೆ ಕೆಲಸಕ್ಕೆ ಬಾರದ ರಾಜಕೀಯ ಬೇಕೆ?**

ರಾಜ್ಯದಲ್ಲಿ ತಲೆದೋರಿರುವ ಭೀಕರ ಬರಗಾಲದ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, ಕಳೆದ ನಾಲ್ಕು ದಶಕಗಳಲ್ಲೇ ಕಾಣದಂತಹ ಬರ ಪರಿಸ್ಥಿತಿ ಈಗ ಕರ್ನಾಟಕದಲ್ಲಿದೆ. ಇಂತಹ ಸಂಕಷ್ಟದ ಸಮಯದಲ್ಲಿ ರೈತರ ಕಣ್ಣೀರು ಒರೆಸುವ ಕೆಲಸ ಮಾಡಬೇಕಾದ ನಾಯಕರು, ಕೇವಲ ಸ್ಟಿಂಗ್ ಆಪರೇಷನ್ ಮತ್ತು ವೈಯಕ್ತಿಕ ದಾಳಿಗಳಲ್ಲಿ ಮಗ್ನರಾಗಿರುವುದು ದೌರ್ಭಾಗ್ಯ. ಇಂತಹ ಕ್ಷುಲ್ಲಕ ನಡವಳಿಕೆಗಳು ರಾಜ್ಯಕ್ಕೆ ಮಾರಕವಾಗಿದ್ದು, ಜನೋಪಕಾರಿ ಕೆಲಸಗಳನ್ನು ಮಾಡುವ ಕಡೆ ಗಮನ ಹರಿಸಿ ಎಂದು ಅವರು ಕಿವಿಮಾತು ಹೇಳಿದರು.

**ರಾಜಕೀಯ ಮೌಲ್ಯಗಳ ಕುಸಿತಕ್ಕೆ ಸೋಮಣ್ಣ ಬೇಸರ:** ಒಟ್ಟಾರೆಯಾಗಿ ವಿ ಸೋಮಣ್ಣ ಅವರು ಇತ್ತೀಚಿನ ರಾಜಕೀಯ ವಿದ್ಯಮಾನಗಳಿಂದ ತೀವ್ರ ಬೇಸರಗೊಂಡಿದ್ದಾರೆ. ಅಭಿವೃದ್ಧಿಯ ಚರ್ಚೆ ನಡೆಯಬೇಕಾದ ಕಡೆಗಳಲ್ಲಿ ಕೇವಲ ಆರೋಪ–ಪ್ರತ್ಯಾರೋಪಗಳೇ ತಾಂಡವವಾಡುತ್ತಿವೆ. ಇಂತಹ ಅಸಂಬದ್ಧ ವಿಚಾರಗಳನ್ನು ಹಿಡಿದು ರಾಜಕೀಯ ಮಾಡುವವರು ಜನರ ವಿಶ್ವಾಸ ಕಳೆದುಕೊಳ್ಳುತ್ತಾರೆ ಎಂದು ಅವರು ಎಚ್ಚರಿಸಿದ್ದಾರೆ.

# ರೋಗಿಗಳ ಜೀವ ಉಳಿಸುವ ವೈದ್ಯರಲ್ಲೇ ಹೆಚ್ಚುತ್ತಿದೆ ಖಿನ್ನತೆ; ಅಂತರರಾಷ್ಟ್ರೀಯ ಸಂಸ್ಥೆಗಳು ಅಲರ್ಟ್!

ಮೊದಲನೇ ಪುಟದಿಂದ

**ಮುಂದಿನ ಕಾರ್ಯಕ್ರಮಗಳು ಮತ್ತು ಯೋಜನೆಗಳು**

ಈ ಉಪಕ್ರಮದ ಭಾಗವಾಗಿ ವೈದ್ಯರ ಅನುಭವಗಳು ಮತ್ತು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿ ದಂತೆ ನೆರವು ಪಡೆಯುವಾಗ ಅವರು ಎದುರಿಸುವ ಅಡೆತಡೆಗಳನ್ನು ತಿಳಿದುಕೊಳ್ಳಲು ರಾಷ್ಟ್ರೀಯ ಮಟ್ಟದ ಸಮೀಕ್ಷೆ ನಡೆಸಲಾಗುತ್ತದೆ.

ಇದರ ಜೊತೆಗೆ ವೈದ್ಯರ ಮಾನಸಿಕ ಕ್ಷೇಮದ ಕುರಿತು ಮೂರು ಭಾಗಗಳ ರಾಷ್ಟ್ರೀಯ ವೆಬಿನಾರ್ ಸರಣಿಯನ್ನು ಆಯೋಜಿಸಲಾಗುತ್ತದೆ. 2027ರ ಜನವರಿಯಲ್ಲಿ ಮಧುರೈನಲ್ಲಿ ನಡೆಯಲಿರುವ ಇಂಡಿಯನ್ ಸೈಕಿಯಾಟ್ರಿಕ್ ಸೊಸೈಟಿಯ ವಾರ್ಷಿಕ ಸಮ್ಮೇಳನದಲ್ಲಿ ರಾಷ್ಟ್ರೀಯ ಮಟ್ಟದ ನೇರ ಕಾರ್ಯಾಗಾರವನ್ನು ಆಯೋಜಿಸುವ ಮೂಲಕ ಈ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲು ಯೋಜಿಸಲಾಗಿದೆ.

ವೈದ್ಯರು ತಮ್ಮ ಸ್ವಂತ ಆರೋಗ್ಯ ಮತ್ತು ಕ್ಷೇಮಕ್ಕೂ ಆದ್ಯತೆ ನೀಡುವಂತೆ ಪ್ರೋತ್ಸಾಹಿಸಲು 'ಕೇರ್ ಫಾರ್ ಸೆಲ್ಫ್ ಪ್ಲೆಡ್ಜ್' ಎಂಬ ಪ್ರತಿಜ್ಞೆಯನ್ನು ರೂಪಿಸುವ ಉದ್ದೇಶವಿದೆ. ಮಾನಸಿಕ ಆರೋಗ್ಯದ ಬಗ್ಗೆ ಮುಕ್ತವಾಗಿ ಚರ್ಚಿಸಲು ಸುರಕ್ಷಿತ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ 'ಕಲ್ಚರ್ ಆಫ್ ಕೇರ್ ಚಾರ್ಟರ್' ರೂಪಿಸುವ ಪ್ರಸ್ತಾಪವೂ ಇದೆ.

**ಸಂಶೋಧನೆಗಳಲ್ಲಿ ಆತಂಕಕಾರಿ ಅಂಶಗಳು**

ಭಾರತದಲ್ಲಿ ನಡೆಸಲಾದ ಕೆಲವು ಅಧ್ಯಯನಗಳು ವೈದ್ಯಕೀಯ ಕ್ಷೇತ್ರದಲ್ಲಿನ ಮಾನಸಿಕ ಆರೋಗ್ಯ ಸಮಸ್ಯೆಗಳ ಗಂಭೀರತೆಯನ್ನು ಎತ್ತಿತೋರಿಸಿವೆ ಎಂದು ಆಯೋಜಕರು ತಿಳಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿಗಳು: ಪದವಿ ಪೂರ್ವ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಸುಮಾರು ಅರ್ಧದಷ್ಟು ಮಂದಿಗೆ ಖಿನ್ನತೆಯ ಲಕ್ಷಣಗಳು ಕಂಡುಬಂದಿವೆ ಎಂದು ಅಧ್ಯಯನಗಳು ಸೂಚಿಸಿವೆ.

ಒತ್ತಡ: ಒಂದು ತೃತೀಯ ಹಂತದ ಆಸ್ಪತ್ರೆಯಲ್ಲಿ ವೈದ್ಯಕೀಯ ತರಬೇತಿ ಪಡೆಯುತ್ತಿರುವ ವೈದ್ಯರು ಹಾಗೂ ಬೋಧಕ ಸಿಬ್ಬಂದಿಯ ಮೇಲೆ ನಡೆಸಿದ ಅಧ್ಯಯನದಲ್ಲಿ ಶೇ. 30.1ರಷ್ಟು ಮಂದಿ ಒತ್ತಡದಿಂದ ಬಳಲುತ್ತಿರುವುದು ಕಂಡುಬಂದಿದೆ.

ಆತ್ಮಹತ್ಯೆಯ ಆಲೋಚನೆಗಳು: ಇದೇ ಅಧ್ಯಯನದಲ್ಲಿ ಶೇ. 16.7ರಷ್ಟು ಮಂದಿ ಆತ್ಮಹತ್ಯೆಯ ಆಲೋಚನೆಗಳನ್ನು ಹೊಂದಿರುವುದಾಗಿ ತಿಳಿಸಿದ್ದಾರೆ.

ಬರ್ನೌಟ್: ಶೇ. 90ಕ್ಕಿಂತ ಹೆಚ್ಚು ಮಂದಿ ಕೆಲಸದ ಒತ್ತಡದಿಂದ ಉಂಟಾಗುವ ದೈಹಿಕ ಮತ್ತು ಮಾನಸಿಕ ದಣಿವನ್ನು ಎದುರಿಸುತ್ತಿರುವುದು ಅಧ್ಯಯನದಲ್ಲಿ ವರದಿಯಾಗಿದೆ.

**ವೈದ್ಯರ ಮಾನಸಿಕ ಆರೋಗ್ಯಕ್ಕೂ ಆದ್ಯತೆ ಅಗತ್ಯ:** ವೈದ್ಯರು ತಮ್ಮ ಮಾನಸಿಕ ಆರೋಗ್ಯಕ್ಕಾಗಿ ನೆರವು ಪಡೆಯುವುದು ಉತ್ತಮ ವೈದ್ಯರಾಗಿರುವುದಕ್ಕೆ ಅಡ್ಡಿಯಲ್ಲ. ಬದಲಾಗಿ, ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅವರ ವೃತ್ತಿಪರ ಜೀವನದ ಪ್ರಮುಖ ಭಾಗವಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ವೈದ್ಯರು ತಮ್ಮ ಸಮಸ್ಯೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಾಗುವಂತಹ ವಾತಾವರಣ ನಿರ್ಮಿಸುವುದು, ಮಾನಸಿಕ ಆರೋಗ್ಯದ ಬಗ್ಗೆ ಇರುವ ಸಾಮಾಜಿಕ ಕಳಂಕವನ್ನು ಕಡಿಮೆ ಮಾಡುವುದು ಮತ್ತು ನೆರವು ಪಡೆಯುವುದನ್ನು ಸಹಜ ಪ್ರಕ್ರಿಯೆಯನ್ನಾಗಿಸುವುದು ಈ ಉಪಕ್ರಮದ ಪ್ರಮುಖ ಗುರಿಗಳಾಗಿವೆ.

# ಇನ್ಮುಂದೆ ರಾಜ್ಯದ ಸರ್ಕಾರಿ ಬಸ್‌ಗಳಿಗೂ ಮೆಟ್ರೋ ರೀತಿ ಸ್ಮಾರ್ಟ್‌ಕಾರ್ಡ್! ಹೇಗೆ ರೀಚಾರ್ಜ್ ಮಾಡುವುದು?

**ಮುಸ್ಸಂಜೆ ಸಮಯ,**

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳ ಪ್ರಯಾಣ ದರ ಪಾವತಿ ವ್ಯವಸ್ಥೆಯಲ್ಲಿ ಬದಲಾವಣೆ ತರಲಾಗುತ್ತಿದ್ದು, ಬೆಂಗಳೂರಿನ 'ನಮ್ಮ ಮೆಟ್ರೋ' ಮಾದರಿಯಲ್ಲಿ ಸ್ಮಾರ್ಟ್‌ಕಾರ್ಡ್ ಮೂಲಕ ಬಸ್ ಪ್ರಯಾಣ ದರ ಪಾವತಿ ವ್ಯವಸ್ಥೆ ಜಾರಿಗೊಳಿಸಲಾಗುತ್ತಿದೆ.

'ಶಕ್ತಿ' ಯೋಜನೆ ಫಲಾನುಭವಿಗಳಿಗೆ ಸ್ಮಾರ್ಟ್‌ಕಾರ್ಡ್ ನೀಡಲು ಈಗಾಗಲೇ ಯೋಜಿಸಲಾಗಿದೆ. ಆ ಮೂಲಕ ಫಲಾನುಭವಿಗಳ ನಿಖರ ಮಾಹಿತಿ ಪಡೆಯಲು ಹಾಗೂ ಯೋಜನೆಯ ದುರುಪಯೋಗ ತಡೆಯಲು ಸರ್ಕಾರ ಮುಂದಾಗಿದೆ. ಇದೀಗ ಶಕ್ತಿ ಫಲಾನುಭವಿಗಳೊಂದಿಗೆ ಇತರ ಪ್ರಯಾಣಿಕರಿಗೂ ಸ್ಮಾರ್ಟ್‌ಕಾರ್ಡ್ ನೀಡಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮುಂದಾಗಿದೆ. ನಾಲ್ಕೂ ನಿಗಮಗಳ ಬಸ್‌ಗಳಲ್ಲಿನ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಿಷನ್ (ಇಟಿಎಂ)ಗಳಲ್ಲಿ ಬಳಕೆ ಮಾಡುವಂತಹ ಸ್ಮಾರ್ಟ್‌ಕಾರ್ಡ್‌ಗಳನ್ನು ಪ್ರಯಾಣಿಕರಿಗೆ ವಿತರಿಸಲು ತೀರ್ಮಾನಿಸಲಾಗಿದೆ.

ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನಾಲ್ಕೂ ನಿಗಮಗಳಲ್ಲಿ ಒಟ್ಟು 26 ಸಾವಿರ ಬಸ್‌ಗಳಿದ್ದು, ಪ್ರತಿದಿನ ಅಂದಾಜು 1.20 ಕೋಟಿ ಪ್ರಯಾಣಿಕರು ಬಸ್ ಸೇವೆ ಬಳಸುತ್ತಿದ್ದಾರೆ. ಅದರಲ್ಲಿ 70ರಿಂದ 75 ಲಕ್ಷ ಪ್ರಯಾಣಿಕರು ಶಕ್ತಿ ಯೋಜನೆ ಫಲಾನುಭವಿಗಳಾಗಿದ್ದಾರೆ. ಆದರೆ, ಶಕ್ತಿ ಯೋಜನೆಯಲ್ಲಿ ಲೋಪಗಳಿವೆ ಎಂಬ ದೂರುಗಳು ಬರುತ್ತಿದ್ದು, ಅದನ್ನು ಸರಿಪಡಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಸ್ಮಾರ್ಟ್‌ಕಾರ್ಡ್ ನೀಡಲು ಅನುಮತಿಸಿದೆ. ಅದರ ಜತೆಗೆ ಉಳಿದ ಪ್ರಯಾಣಿಕರಿಗೂ



ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತಿದ್ದು, ಮೊದಲ ಹಂತದಲ್ಲಿ ಶಕ್ತಿ ಯೋಜನೆ ಫಲಾನುಭವಿಗಳ ಜತೆಗೆ ಒಟ್ಟು 1 ಕೋಟಿ ಪ್ರಯಾಣಿಕರಿಗೆ ಸ್ಮಾರ್ಟ್‌ಕಾರ್ಡ್ ನೀಡಲಾಗುತ್ತದೆ. ಈ ಯೋಜನೆ ಅನುಷ್ಠಾನಕ್ಕೆ ಕೆಎಸ್ಸಾರ್ಟಿಸಿಯನ್ನು ನೋಡಲ್ ಸಂಸ್ಥೆಯಾಗಿ ನೇಮಿಸಲಾಗಿದೆ.

**ಚಿಪ್ ಅಳಪಡಿಸಿರುವ ಕಾರ್ಡ್:**

ಶಕ್ತಿ ಯೋಜನೆ ಹೊರತುಪಡಿಸಿ ಉಳಿದ ಪ್ರಯಾಣಿಕರು ಪಡೆಯುವ ಸ್ಮಾರ್ಟ್ ಕಾರ್ಡ್‌ಗಳನ್ನು ರೀಚಾರ್ಜ್ ಮಾಡಿಕೊಳ್ಳಬಹುದಾಗಿದ್ದು, ಅದರ ಮೂಲಕ ಬಸ್ ಪ್ರಯಾಣ ದರ ಪಾವತಿಸಲು ಅವಕಾಶ ನೀಡಲಾಗುತ್ತದೆ. ಅದಕ್ಕಾಗಿ ಸ್ಮಾರ್ಟ್‌ಕಾರ್ಡ್‌ಗಳಲ್ಲಿ ಚಿಪ್‌ಗಳನ್ನು ಅಳವಡಿಸಲಾಗುತ್ತದೆ. ಅದನ್ನು ಇಟಿಎಂ ಮೂಲಕ ರೀಡ್ ಮಾಡಿ ಪ್ರಯಾಣ ದರ ಕಡಿತಗೊಳಿಸಬಹುದಾಗಿದೆ. ಕೆಎಸ್ಸಾರ್ಟಿಸಿ ನೀಡುವ ಸ್ಮಾರ್ಟ್‌ಕಾರ್ಡ್ ಉಳಿದ ಮೂರು ನಿಗಮಗಳಾದ ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ಮತ್ತು ಕೆಕೆಆರ್‌ಟಿಸಿ ಬಸ್‌ಗಳಲ್ಲೂ ಬಳಕೆ ಮಾಡಬಹುದಾಗಿದೆ. ಭವಿಷ್ಯದಲ್ಲಿ ಈ ಸ್ಮಾರ್ಟ್‌ಕಾರ್ಡ್ ಮೆಟ್ರೋ ರೈಲು ಮತ್ತು ಉಪನಗರ ರೈಲು ಪ್ರಯಾಣ ದರ ಪಾವತಿಗೂ ಅವಕಾಶ ಕಲ್ಪಿಸಲು ಯೋಜಿಸಲಾಗಿದೆ.

**ಸ್ಮಾರ್ಟ್ ಕಾರ್ಡ್ ರೀಚಾರ್ಜ್ ಮಾಡಿಕೊಳ್ಳಲು ಪ್ರತ್ಯೇಕ ಆಪ್**

ಹಾಗೆಯೇ, ಸ್ಮಾರ್ಟ್‌ಕಾರ್ಡ್ ರೀಚಾರ್ಜ್ ಮಾಡಿಕೊಳ್ಳಲು ಪ್ರತ್ಯೇಕ ಮೊಬೈಲ್ ಅಪ್ಲಿಕೇಷನ್ ಕೂಡ ಅಭಿವೃದ್ಧಿಪಡಿಸಲಾ ಗುತ್ತದೆ. ಸ್ಮಾರ್ಟ್‌ಕಾರ್ಡ್ ಪೂರೈಕೆ ಹಾಗೂ ಅದರ ನಿರ್ವಹಣೆಗೆ ಸಂಬಂಧಿಸಿ ಖಾಸಗಿ ಸಂಸ್ಥೆ ನೇಮಿಸಲು ಕೆಎಸ್ಸಾರ್ಟಿಸಿ ಮುಂದಾಗಿದೆ. ಈ ಮೊಬೈಲ್ ಅಪ್ಲಿಕೇಷನ್ ಮೂಲಕ ಡಿಜಿಟಲ್ ಟಿಕೆಟ್ ಖರೀದಿ ಸೇವೆ ನೀಡಲಾಗುತ್ತದೆ.

# 'ಜಿಹಾದಿ', 'ಕಾಫಿರ್' ಪದಗಳ ಬಳಕೆ ಅಪರಾಧವಲ್ಲ : ಹೈಕೋರ್ಟ್ ಮಹತ್ವದ ಆದೇಶ

**ಮುಸ್ಸಂಜೆ ಸಮಯ,**

ಬೆಂಗಳೂರು: ಫೇಸ್‌ಬುಕ್ ಪೋಸ್ಟ್‌ನಲ್ಲಿ 'ಜಿಹಾದಿ' ಮತ್ತು 'ಕಾಫೀರ' ಎಂಬ ಪದಗಳನ್ನು ಬಳಸಿದ ತಕ್ಷಣಕ್ಕೇ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟುಮಾಡಿದ ಅಥವಾ ವಿವಿಧ ಸಮುದಾಯಗಳ ನಡುವೆ ದ್ವೇಷಪ್ರಚೋದಿಸಿದ ಅಪರಾಧ ಸಾಬೀತಾಗುವುದಿಲ್ಲ ಎಂದು ಕರ್ನಾಟಕ ಹೈಕೋರ್ಟ್ ಮಹತ್ವದ ಅಭಿಪ್ರಾಯ ವ್ಯಕ್ತಪಡಿಸಿದೆ.

'ಹಿಂದೂ ಸಾಮ್ರಾಟ್ ಧರ್ಮಸೇನೆ' ಎಂಬ ಫೇಸ್‌ಬುಕ್ ಪುಟದಲ್ಲಿ ಪ್ರಕಟವಾಗಿದ್ದ ಸಂದೇಶವೊಂದರ ಸಂಬಂಧ, ಮಧುಗಿರಿಯ ಬಡವನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ರದ್ದುಗೊಳಿಸಿ ನ್ಯಾಯಪೀಠವು ಈ ಆದೇಶ ನೀಡಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಅತುಲ್ ಕುಮಾರ್ ಸಬರ್ವಾಲ್ ಅಲಿಯಾಸ್ ಮಧುಗಿರಿ ಮೋದಿ ಎಂಬುವರು ತಮ್ಮ ವಿರುದ್ಧದ ಎಫ್‌ಐಆರ್ (FIR) ಹಾಗೂ ನ್ಯಾಯಾಲಯದ ವಿಚಾರಣೆಯನ್ನು ರದ್ದುಗೊಳಿಸುವಂತೆ ಕೋರಿ




ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಅರ್ಜಿದಾರರ ಮೇಲಿದ್ದ ಎಫ್‌ಐಆರ್ ಹಾಗೂ ವಿಚಾರಣಾ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಿ ಅರ್ಜಿಯನ್ನು ಪುರಸ್ಕರಿಸಿದೆ.

ಅದೇ ಸಮಯದಲ್ಲಿ ನ್ಯಾಯಪೀಠವು ಮುಖ್ಯ ಸ್ಪಷ್ಟನೆಯೊಂದನ್ನು ನೀಡಿದ್ದು, 'ಜಿಹಾದಿ' ಅಥವಾ 'ಕಾಫೀರ' ಪದಗಳ ಬಳಕೆ ಯಾವುದೇ ಸಂದರ್ಭದಲ್ಲೂ ಅಪರಾಧವಾಗುವುದಿಲ್ಲ ಎಂಬ ಯಾವುದೇ ಸಾರ್ವತ್ರಿಕ ನಿಯಮ ಅಥವಾ ಸೂತ್ರವನ್ನು ಹೈಕೋರ್ಟ್ ರೂಪಿಸುತ್ತಿಲ್ಲ ಎಂದು ಹೇಳಿದೆ. ಈ ನಿರ್ದಿಷ್ಟ ಪ್ರಕರಣದಲ್ಲಿ ಹಂಚಿಕೊಳ್ಳಲಾಗಿದ್ದ ಪೋಸ್ಟ್‌ನ ಪೂರ್ಣ ವಿಷಯ, ಅದರ ಸಂದರ್ಭ ಹಾಗೂ ಕಾನೂನಿನ ಅಗತ್ಯ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ಈ ತೀರ್ಪು ನೀಡಲಾಗಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

# ಬೇಲೂರು ಬ್ಲಾಕ್ ಕಾಂಗ್ರೆಸ್ ಗದ್ದುಗೆಗೆ ಪೈಪೋಟಿ: ಬಿ. ಗಿರೀಶ್, ಬೆಸ್ಟ್ ಭರತ್, ಕೆಡಿಪಿ ನಂದೀಶ್ ನಡುವೆ ತೆರೆಮರೆಯಲ್ಲಿ ಭಾರಿ ಕಸರತ್ತು!

ಮುಸ್ಸಂಜೆ ಸಮಯ,

ಬೇಲೂರು: ಹಾಸನ ಜಿಲ್ಲಾ ಕಾಂಗ್ರೆಸ್‌ಗೆ ನೂತನ ಅಧ್ಯಕ್ಷರ ನೇಮಕವಾದ ಬೆನ್ನಲ್ಲೇ ಬೇಲೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ರಾಜಕೀಯ ಚಟುವಟಿಕೆಗಳು ಗರಿಗೆದರಿವೆ. ಪ್ರಸ್ತುತ ಅಧ್ಯಕ್ಷರಾಗಿರುವ ಎಂ.ಜೆ. ನಿಶಾಂತ್ ಅವರ ಬದಲಾವಣೆಯ ಚರ್ಚೆ ಮುನ್ನೆಲೆಗೆ ಬಂದಿದ್ದು, ಮುಂದಿನ ಅಧ್ಯಕ್ಷ ಸ್ಥಾನವನ್ನು ತಮ್ಮದಾಗಿಸಿಕೊಳ್ಳಲು ಪ್ರಮುಖ ಆಕಾಂಕ್ಷಿಗಳು ತೆರೆಮರೆಯಲ್ಲಿ ರಾಜಕೀಯ ಕಸರತ್ತು ನಡೆಸುತ್ತಿದ್ದಾರೆ ಎನ್ನಲಾಗಿದೆ.

ಬೇಲೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪುರಸಭೆಯ ಮಾಜಿ ಅಧ್ಯಕ್ಷ ಬಿ. ಗಿರೀಶ್, ಮಾಜಿ ಪುರಸಭಾ ಸದಸ್ಯ ಭರತ್ ಕುಮಾರ್ ಹಾಗೂ ಕೆಡಿಪಿ ನಂದೀಶ್ ಅವರ ಹೆಸರುಗಳು ಪ್ರಮುಖವಾಗಿ ಕೇಳಿಬರುತ್ತಿವೆ. ಈ ಮೂವರ ಪೈಕಿ ಯಾರಿಗೆ ಅಧ್ಯಕ್ಷ ಪಟ್ಟ ಒಲಿಯಲಿದೆ ಎಂಬ ಚರ್ಚೆ ಕಾಂಗ್ರೆಸ್ ವಲಯದಲ್ಲಿ ಕುತೂಹಲ ಮೂಡಿಸಿದ್ದು, ಪ್ರತಿಯೊಬ್ಬ ಆಕಾಂಕ್ಷಿಯೂ ತಮ್ಮದೇ ಆದ ರಾಜಕೀಯ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ ಎನ್ನಲಾಗಿದೆ.

ಪುರಸಭೆಯ ಮಾಜಿ ಅಧ್ಯಕ್ಷ ಬಿ. ಗಿರೀಶ್ ಅವರು ಸ್ಥಳೀಯ ರಾಜಕಾರಣದಲ್ಲಿ ತಮ್ಮದೇ ಆದ ಗುರುತನ್ನು ಹೊಂದಿದ್ದು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ಆಕಾಂಕ್ಷಿಯಾಗಿ ಗುರುತಿಸಿಕೊಂಡಿದ್ದಾರೆ. ಪಕ್ಷದ ಸಂಘಟನೆಯಲ್ಲಿ ಜವಾಬ್ದಾರಿ ವಹಿಸಿಕೊಳ್ಳುವ ಉದ್ದೇಶದಿಂದ ಅವರು ರಾಜಕೀಯ ಬೆಂಬಲ ಕ್ರೋಢೀಕರಿಸುವ ಪ್ರಯತ್ನದಲ್ಲಿದ್ದಾರೆ ಎಂಬ ಚರ್ಚೆ ಪಕ್ಷದ ವಲಯದಲ್ಲಿ ಕೇಳಿಬರುತ್ತಿದೆ.

ಇನ್ನೊಂದೆಡೆ, ಮಾಜಿ ಪುರಸಭಾ ಸದಸ್ಯ ಭರತ್ ಕುಮಾರ್ ಅವರ ಹೆಸರೂ ಅಧ್ಯಕ್ಷ ಸ್ಥಾನದ ಪೈಪೋಟಿಯಲ್ಲಿ ಮುಂಚೂಣಿಯಲ್ಲಿದೆ ಎನ್ನಲಾಗಿದೆ. ಸ್ಥಳೀಯ ಮಟ್ಟದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸುವುದು ಹಾಗೂ ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್‌ಗೆ ಅನುಕೂಲವಾಗುವಂತೆ ಕಾರ್ಯನಿರ್ವಹಿಸುವ ಅವಕಾಶವನ್ನು ಪಡೆಯಲು ಅವರು ಪ್ರಯತ್ನಿಸುತ್ತಿದ್ದಾರೆ ಎಂಬ ಮಾತುಗಳು ರಾಜಕೀಯ ವಲಯದಲ್ಲಿ ಕೇಳಿಬರುತ್ತಿವೆ.

ಇದೇ ವೇಳೆ, ಕೆಡಿಪಿ ನಂದೀಶ್ ಅವರ ಹೆಸರೂ ಅಧ್ಯಕ್ಷ ಸ್ಥಾನದ ಚರ್ಚೆಯಲ್ಲಿ ಪ್ರಮುಖವಾಗಿ ಪ್ರಸ್ತಾಪವಾಗುತ್ತಿದೆ. ಪಕ್ಷದ ಹಿರಿಯ ನಾಯಕರು ಹಾಗೂ ಪ್ರಮುಖರ ಬೆಂಬಲ ಪಡೆಯುವ ನಿಟ್ಟಿನಲ್ಲಿ ಆಕಾಂಕ್ಷಿಗಳ ನಡುವೆ ತೆರೆಮರೆಯ ಚಟುವಟಿಕೆಗಳು ನಡೆಯುತ್ತಿವೆ ಎನ್ನಲಾಗಿದ್ದು, ಅಂತಿಮವಾಗಿ ಪಕ್ಷದ ವರಿಷ್ಠರು ಯಾರ ಪರ ಒಲವು ತೋರುತ್ತಾರೆ ಎಂಬುದರ ಮೇಲೆ ಎಲ್ಲರ ಗಮನ ನೆಟ್ಟಿದೆ.

ಪ್ರಸ್ತುತ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿರುವ ಎಂ.ಜೆ. ನಿಶಾಂತ್ ಅವರು ಕಳೆದ ಆರು ವರ್ಷಗಳಿಂದ ಎರಡು ಅವಧಿಗಳಲ್ಲಿ ಪಕ್ಷದ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ಅವರ ಅವಧಿಯಲ್ಲಿ ಬೇಲೂರು ಪುರಸಭೆಯ 23 ಸದಸ್ಯ ಬಲದ ಪೈಕಿ ಕಾಂಗ್ರೆಸ್ 17 ಸ್ಥಾನಗಳನ್ನು ಗೆದ್ದು ಅಧಿಕಾರದ ಚುಕ್ಕಾಣಿ ಹಿಡಿದಿತ್ತು. ಹೀಗಾಗಿ, ಮುಂದಿನ ಅಧ್ಯಕ್ಷರ ಆಯ್ಕೆಯಲ್ಲಿ ಹಿಂದಿನ ಕಾರ್ಯವೈಖರಿ ಹಾಗೂ ಪಕ್ಷದ ಸಂಘಟನೆಯಲ್ಲಿ ಅವರ ಕೊಡುಗೆಯೂ



ಚರ್ಚೆಗೆ ಬರಬಹುದಾಗಿದೆ.

ಹಾಸನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶಶಿಧರ್ ನೇಮಕಗೊಂಡ ಬಳಿಕ ಜಿಲ್ಲೆಯ ವಿವಿಧ ಬ್ಲಾಕ್ ಕಾಂಗ್ರೆಸ್ ಘಟಕಗಳಲ್ಲಿಯೂ ಬದಲಾವಣೆಯಾಗುವ ಸಾಧ್ಯತೆ ಕುರಿತು ಚರ್ಚೆಗಳು ನಡೆಯುತ್ತಿವೆ. ಈ ಬೆಳವಣಿಗೆಯ ಹಿನ್ನೆಲೆಯಲ್ಲಿ ಬೇಲೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳಲ್ಲಿ ನಿರೀಕ್ಷೆ ಹೆಚ್ಚಾಗಿದ್ದು, ಪಕ್ಷದ ನಾಯಕತ್ವದ ಮುಂದಿನ ನಡೆಗಾಗಿ ಕಾಯುತ್ತಿದ್ದಾರೆ.

ಮುಂಬರುವ ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ಪುರಸಭೆ ಚುನಾವಣೆಗಳು ಕಾಂಗ್ರೆಸ್ ಪಾಲಿಗೆ ಮಹತ್ವದ್ದಾಗಿವೆ. ಈ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲಿಸುವ ಹೊಣೆಗಾರಿಕೆಯನ್ನು ನಿಭಾಯಿಸಬಲ್ಲ ಸಂಘಟನಾ ಸಾಮರ್ಥ್ಯ ಹೊಂದಿರುವವರಿಗೆ ಅಧ್ಯಕ್ಷ ಸ್ಥಾನ ನೀಡಬೇಕು ಎಂಬ ಅಭಿಪ್ರಾಯವೂ ಪಕ್ಷದ ವಲಯದಲ್ಲಿ ವ್ಯಕ್ತವಾಗುತ್ತಿದೆ.

ಇನ್ನೊಂದೆಡೆ, ಅಧ್ಯಕ್ಷ ಸ್ಥಾನ ಹಂಚಿಕೆಯಲ್ಲಿ ಸಾಮಾಜಿಕ ಪ್ರಾತಿನಿಧ್ಯವೂ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ ಎಂಬ ಚರ್ಚೆ ನಡೆಯುತ್ತಿದೆ.ಹಳೇಬೀಡು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಲಿಂಗಾಯತ ಸಮುದಾಯದವರಿಗೆ ಅವಕಾಶ ದೊರೆಯುವ ಸಾಧ್ಯತೆಯ ಹಿನ್ನೆಲೆಯಲ್ಲಿ, ಬೇಲೂರು ಬ್ಲಾಕ್ ಅಧ್ಯಕ್ಷ ಸ್ಥಾನವನ್ನು ಒಕ್ಕಲಿಗ ಅಥವಾ ದಲಿತ ಸಮುದಾಯದವರಿಗೆ ನೀಡಬಹುದೆಂಬ ರಾಜಕೀಯ ಲೆಕ್ಕಾಚಾರವೂ ಕೇಳಿಬರುತ್ತಿದೆ. ಆದರೆ, ಈ ಕುರಿತು ಯಾವುದೇ ಅಧಿಕೃತ ನಿರ್ಧಾರ ಪ್ರಕಟವಾಗಿಲ್ಲ.

ಬೇಲೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ರಾಜಕಾರಣದಲ್ಲಿ ಮಾಜಿ ಸಚಿವ ಬಿ. ಶಿವರಾಂ ಅವರ ಪ್ರಭಾವ ಪ್ರಮುಖವಾಗಿರುವುದರಿಂದ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆಯಲ್ಲಿ ಅವರ ನಿಲುವು ಮಹತ್ವ ಪಡೆಯಬಹುದು ಎಂಬ ಅಭಿಪ್ರಾಯವೂ ಪಕ್ಷದ ವಲಯದಲ್ಲಿದೆ. ಒಟ್ಟಿನಲ್ಲಿ, ಬಿ.ಗಿರೀಶ್, ಭರತ್ ಕುಮಾರ್ ಹಾಗೂ ಕೆಡಿಪಿ ನಂದೀಶ್ ಅವರ ಹೆಸರುಗಳ ಸುತ್ತ ಚರ್ಚೆ ಗರಿಗೆದರಿದ್ದು, ಬೇಲೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟ ಯಾರ ಪಾಲಾಗಲಿದೆ ಎಂಬುದನ್ನು ಕಾದುನೋಡಬೇಕಿದೆ. ತೆರೆಮರೆಯ ಕಸರತ್ತಿಗೆ ಅಂತಿಮವಾಗಿ ಪಕ್ಷದ ವರಿಷ್ಠರ ನಿರ್ಧಾರವೇ ತೆರೆ ಎಳೆಯಲಿದೆ.

–ಅರುಣ್ ಸಿಂಗ್

# ದೊಡ್ಡಬಳ್ಳಾಪುರದಲ್ಲಿ ಮತ್ತಿಬ್ಬರು ನೈಜೀರಿಯಾ ಪ್ರಜೆಗಳ ಗಡಿಪಾರು

**ಮುಸ್ಸಂಜೆ ಸಮಯ,** ದೊಡ್ಡಬಳ್ಳಾಪುರ: ಮನೆ ಮನೆಗೆ ಪೊಲೀಸ್ ಕಾರ್ಯಕ್ರಮದಡಿ ಗ್ರಾಮಾಂತರ ಠಾಣೆ ಪೊಲೀಸರು ಪರಿಶೀಲನೆ ನಡೆಸುತ್ತಿದ್ದು, ಕೈಗಾರಿಕಾ ಪ್ರದೇಶಗಳಲ್ಲಿ ಅಕ್ರಮವಾಗಿ ವಾಸಿಸುತ್ತಿದ್ದ ಮತ್ತಿಬ್ಬರು ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಿ ಗಡಿಪಾರಿಗೆ ಶಿಫಾರಸು ಮಾಡಿದ್ದಾರೆ.

ಬುಧವಾರ ರಾತ್ರಿ ಬಾಶೆಟ್ಟಿಹಳ್ಳಿಯಲ್ಲಿ ಮೂವರು ನೈಜೀರಿಯಾ ಪ್ರಜೆ ವಶಕ್ಕೆ ಪಡೆದು ಗಡಿಪಾರು ಮಾಡಲು ಸಿದ್ಧತೆ ನಡೆಸುತ್ತಿರುವ ಸಮಯದಲ್ಲಿ ಗುರುವಾರ ರಾತ್ರಿ ದರ್ಗಾಪುರದಲ್ಲಿ ಅಕ್ರಮವಾಗಿ ವಾಸವಿದ್ದ ನೈಜೀರಿಯಾ ಹಾಗೂ ಐವರಿ ಕೋಸ್ಟ್ ದೇಶದ ಪ್ರಜೆಗಳಾದ ಪೀಟರ್ ಮತ್ತು ಬೋರೆವಿಲ್ಲೆ ಎಂಬುವವರನ್ನು ವಶಕ್ಕೆ ಪಡೆದು ಗಡಿಪಾರು ಮಾಡಲಾಗಿದೆ.

ಡಿವೈಎಸ್‌ಪಿ ಪಾಂಡುರಂಗ ಸೂಚನೆಯ ಮೇರೆಗೆ ಗ್ರಾಮಾಂತರ ಠಾಣೆ ಇನ್‌ಸ್ಪೆಕ್ಟರ್ ಎಂ.ವಿ.ನವೀನ್ ಕುಮಾರ್ ನೇತೃತ್ವದಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯಲ್ಲಿ ಇಲ್ಲಿಯವರೆಗೆ ಐವರು ವಿದೇಶಿ ಪ್ರಜೆಗಳು ಪತ್ತೆ ಹಚ್ಚಿ ಗಡಿಪಾರು ಮಾಡಲಾಗಿದೆ.

# Editorial /ಸಂಪಾದಕೀಯ

## ಭೂಮಿ ಮತ್ತು ಅದರ ಜನ
## ಕ್ಯಾಮರೂನ್

### ಆಫ್ರಿಕಾದ ಸಾಂಸ್ಕೃತಿಕ ತುಣುಕು, ಸಿಂಹಗಳ ನಾಡು ಮತ್ತು ವೈವಿಧ್ಯಮಯ ಪ್ರಕೃತಿಯ ಕೌತುಕ!

ಮಧ್ಯ ಮತ್ತು ಪಶ್ಚಿಮ ಆಫ್ರಿಕಾದ ಮುಖಜ ಭೂಮಿಯಲ್ಲಿ, ಅಟ್ಲಾಂಟಿಕ್ ಸಾಗರದ ಗಿನಿಯಾ ಕೊಲ್ಲಿಯ ತೀರದಲ್ಲಿ ನೆಲೆಸಿರುವ 'ಕ್ಯಾಮರೂನ್' (Cameroon) ದೇಶವನ್ನು "ಆಫ್ರಿಕಾದ ಸಾಂಸ್ಕೃತಿಕ ತುಣುಕು" (Africa in Miniature) ಎಂದೇ ಕರೆಯಲಾಗುತ್ತದೆ. ಏಕೆಂದರೆ, ಇಡೀ ಆಫ್ರಿಕಾ ಖಂಡದಲ್ಲಿ ಕಂಡುಬರುವ ವಿವಿಧ ವಾತಾವರಣ, ಭೂಪ್ರದೇಶ, ಭಾಷೆಗಳು ಮತ್ತು ಸಂಸ್ಕೃತಿಗಳೆಲ್ಲವೂ ಈ ಒಂದೇ ಪುಟ್ಟ ದೇಶದಲ್ಲಿದೆ! ಮರುಭೂಮಿ, ಸಾಂದ್ರ ಮಳೆಕಾಡು, ಪರ್ವತ ಸಾಲುಗಳು ಮತ್ತು ಸುಂದರ ಕಡಲತೀರಗಳನ್ನು ತನ್ನೊಡಲಲ್ಲಿ ಇಟ್ಟುಕೊಂಡಿರುವ ಈ ಶಕ್ತಿಶಾಲಿ ನಾಡಿನ ಜಗತ್ತನ್ನು ತಿಳಿಯೋಣ.

1. ಅಪ್ರತಿಮ ಫುಟ್‌ಬಾಲ್ ವೈಭವ ಮತ್ತು 'ಇಂಡೊಮಿಟೇಬಲ್ ಲಯನ್ಸ್' (The Indomitable Lions): ಆಫ್ರಿಕಾ ಖಂಡದಲ್ಲೇ ಫುಟ್‌ಬಾಲ್ ಕ್ರೀಡೆಯ ಬೃಹತ್ ಶಕ್ತಿಯಾಗಿರುವ ದೇಶ ಕ್ಯಾಮರೂನ್. 'ಅನಿರ್ಬಂಧಿತ ಸಿಂಹಗಳು' (Indomitable Lions) ಎಂದೇ ಕರೆಯಲ್ಪಡುವ ಇಲ್ಲಿನ ರಾಷ್ಟ್ರೀಯ ಫುಟ್‌ಬಾಲ್ ತಂಡವು ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಗೆದ್ದಿದೆ. ಸ್ಯಾಮುಯೆಲ್ ಎಟೊ (Samuel Eto'o) ಮತ್ತು ರೋಜರ್ ಮಿಲ್ಲಾರಂತಹ ಜಗತ್ಪಸಿದ್ಧ ಫುಟ್‌ಬಾಲ್ ತಾರೆಗಳನ್ನು ಈ ನಾಡು ಜಗತ್ತಿಗೆ ನೀಡಿದೆ.

2. ಕ್ಯಾಮರೂನ್ ಪರ್ವತ – ಸಕ್ರಿಯ ಅಗ್ನಿಪರ್ವತದ ಶಿಖರ (Mount Cameroon): ಪಶ್ಚಿಮ ಮತ್ತು ಮಧ್ಯ ಆಫ್ರಿಕಾದಲ್ಲೇ ಅತ್ಯಂತ ಎತ್ತರವಾದ 'ಕ್ಯಾಮರೂನ್ ಪರ್ವತ' (4,040 ಮೀಟರ್) ಈ ದೇಶದ ಪ್ರಮುಖ ಆಕರ್ಷಣೆ. 'ಮಾಂಟ್ ಫಾಕೊ' ಎಂದೂ ಕರೆಯಲ್ಪಡುವ ಈ ಪರ್ವತವು ಇಂದಿಗೂ ಸಕ್ರಿಯವಾಗಿರುವ ಅಗ್ನಿಪರ್ವತವಾಗಿದ್ದು, ಸಾಹಸಿ ಪರ್ವತಾರೋಹಿಗಳ ನೆಚ್ಚಿನ ತಾಣವಾಗಿದೆ.

3. ಭಾಷಾ ವೈವಿಧ್ಯತೆಯ ವಿಸ್ಮಯ (ಐಚಿಟಿಜ ಠಜಿ 230+ ಐಚಿಟಿರಣಚಿರಿಜ): ಕ್ಯಾಮರೂನ್ ದೇಶದಲ್ಲಿ 230ಕ್ಕೂ ಹೆಚ್ಚು ವಿಭಿನ್ನ ಬುಡಕಟ್ಟು ಭಾಷೆಗಳು ಮತ್ತು ಉಪಭಾಷೆಗಳನ್ನು ಮಾತನಾಡಲಾಗುತ್ತದೆ! ಇದಲ್ಲದೆ, ಈ ದೇಶವು ಇಂಗ್ಲಿಷ್ ಮತ್ತು ಫ್ರೆಂಚ್ ಎರಡನ್ನೂ ತನ್ನ ಅಧಿಕೃತ ಭಾಷೆಗಳನ್ನಾಗಿ ಹೊಂದಿರುವ ಆಫ್ರಿಕಾದ ಏಕೈಕ ದೇಶವಾಗಿದೆ.

4. ರಿಂಗ್ ರೋಡ್ ಮತ್ತು ಸಾಂಪ್ರದಾಯಿಕ ರಾಜ್ಯಗಳು (The Ring Road &




Bamenda Grassfields): ಕ್ಯಾಮರೂನ್‌ನ ವಾಯುವ್ಯ ಭಾಗದಲ್ಲಿರುವ 'ರಿಂಗ್ ರೋಡ್' ಪ್ರಕೃತಿ ಸೌಂದರ್ಯದ ತಾಣವಾಗಿದೆ. ಇಲ್ಲಿ ಅತ್ಯಂತ ಹಳೆಯ ಬಮೆಂಡಾ ಹುಲ್ಲುಗಾವಲುಗಳು ಹಾಗೂ ಪ್ರತ್ಯೇಕವಾದ ಸಾಂಪ್ರದಾಯಿಕ ಬುಡಕಟ್ಟು ಸಾಮ್ರಾಜ್ಯಗಳನ್ನು (Fon kingdoms) ಕಾಣಬಹುದು. ಇಲ್ಲಿನ ರಾಜರನ್ನು 'ಫೋನ್' (Fon) ಎಂದು ಕರೆಯಲಾಗುತ್ತದೆ.

ತಿಳಿದಿರಲಿ (Quick Facts for Your Knowledge):

ರಾಜಧಾನಿ: ಯಾವುಂಡೆ (Yaoundé) (ಆದರೆ 'ದುವಾಲಾ' (Douala) ದೇಶದ ಬೃಹತ್ ವಾಣಿಜ್ಯ ನಗರವಾಗಿದೆ).

ನಾಣ್ಯ/ಕರೆನ್ಸಿ: Central African CFA Franc (XAF).

ಅಧಿಕೃತ ಭಾಷೆ: ಇಂಗ್ಲಿಷ್ ಮತ್ತು ಫ್ರೆಂಚ್ (English & French).

ದೂರ: ಬೆಂಗಳೂರಿನಿಂದ ಸುಮಾರು 7,800 ಕಿ.ಮೀ.

ದೇಶದ ಹೆಸರಿನ ಹಿನ್ನೆಲೆ: 15ನೇ ಶತಮಾನದಲ್ಲಿ ಪೋರ್ಚುಗೀಸ್ ನಾವಿಕರು ಇಲ್ಲಿನ 'ವೂರಿ' ನದಿಯಲ್ಲಿ ಹೇರಳವಾಗಿ ಸಿಕ್ಕ ಸಿಗಡಿಗಳನ್ನು (Prawns) ನೋಡಿ ಈ ಪ್ರದೇಶಕ್ಕೆ "ರಿಯೋ ಡೋಸ್ ಕ್ಯಾಮರಾಯ್ಸ್" (Rio dos Camarões – ಅಂದರೆ 'ಸಿಗಡಿಗಳ ನದಿ') ಎಂದು ಹೆಸರಿಟ್ಟರು. ಇದೇ ಮುಂದೆ 'ಕ್ಯಾಮರೂನ್' ಆಯಿತು!

ಕಾಫಿ ಮತ್ತು ಕೊಕೊ ಹಬ್: ಜಗತ್ತಿನ ಅತ್ಯುತ್ತಮ ಗುಣಮಟ್ಟದ ಅರೇಬಿಕಾ ಕಾಫಿ ಮತ್ತು ಕೊಕೊ (ಚಾಕೊಲೇಟ್ ಕಚ್ಚಾವಸ್ತು) ಬೆಳೆಯುವ ಪ್ರಮುಖ ದೇಶಗಳಲ್ಲಿ ಕ್ಯಾಮರೂನ್ ಒಂದಾಗಿದೆ.

ಯುನೆಸ್ಕೋ ತಾಣ: ಕ್ಯಾಮರೂನ್‌ನ 'ಡ್ಜಾ ಫೌನಲ್ ರಿಸರ್ವ್' (Dja Faunal Reserve) ದಟ್ಟವಾದ ಕನ್ಯಾ ಮಳೆಕಾಡಾಗಿದ್ದು, ಅಳಿವಿನಂಚಿನಲ್ಲಿರುವ ಪಶ್ಚಿಮದ ತಗ್ಗುಪ್ರದೇಶದ ಗೊರಿಲ್ಲಾಗಳು ಮತ್ತು ಆಫ್ರಿಕನ್ ಆನೆಗಳಿಗೆ ಅಭಯಾರಣ್ಯವಾಗಿದೆ.

ಈ ಲೇಖನದ 'ಪಂಚ್': "ಇಡೀ ಆಫ್ರಿಕಾ ಖಂಡದ ಪ್ರಕೃತಿ ಮತ್ತು ಸಂಸ್ಕೃತಿಯನ್ನು ತನ್ನ ಸಣ್ಣ ಭೌಗೋಳಿಕ ಗಡಿಯೊಳಗೆ ಇಟ್ಟುಕೊಂಡಿರುವ ಕ್ಯಾಮರೂನ್ ನಮಗೆ ಕಲಿಸುವುದು ಒಂದೇ– ವೈವಿಧ್ಯತೆಯೇ ಸೌಂದರ್ಯ, ಒಗ್ಗಟ್ಟಿನಿಂದ ಹೋರಾಡುವುದೇ ಯಶಸ್ಸಿನ ನಿಜವಾದ ಶಕ್ತಿ."



–ನವೀನ್ ನಾಗರಾಜ

## ರೈತರಿಗೆ ಬರದ ಹೊಡೆತ, ಜನರಿಗೆ ಬೆಲೆ ಏರಿಕೆ ಬಿಸಿ; ಸಚಿವರು, ಸಂಸದರಿಗೆ 31 ಲಕ್ಷದ ಕಾರು ಭಾಗ್ಯ!

**ಮುಸ್ಸಂಜೆ ಸಮಯ,**

ಬೆಂಗಳೂರು: ರಾಜ್ಯದಲ್ಲಿ ಬರದ ಸಂಕಷ್ಟ, ರೈತರ ಆರ್ಥಿಕ ಸಮಸ್ಯೆ, ಅಗತ್ಯ ವಸ್ತುಗಳ ಬೆಲೆ ಏರಿಕೆ ಆತಂಕದ ನಡುವೆ ಕರ್ನಾಟಕ ಸರ್ಕಾರ ಸಚಿವರು ಹಾಗೂ ಸಂಸದರಿಗೆ ಹೊಸ ಕಾರು ಖರೀದಿಸುವ ಗರಿಷ್ಠ ಬೆಲೆ ಮಿತಿಯನ್ನು ?26 ಲಕ್ಷದಿಂದ ?31 ಲಕ್ಷಕ್ಕೆ ಹೆಚ್ಚಿಸಿದೆ. ಒಂದೆಡೆ ಜನಸಾಮಾನ್ಯರು ದಿನನಿತ್ಯದ ಖರ್ಚುಗಳನ್ನು ನಿಭಾಯಿಸಲು ಪರದಾಡುತ್ತಿದ್ದರೆ, ಮತ್ತೊಂದೆಡೆ ಜನಪ್ರತಿನಿಧಿಗಳ ಅಧಿಕೃತ ವಾಹನಗಳ ಖರೀದಿ ಮಿತಿ ಹೆಚ್ಚಿಸಿರುವುದು ಚರ್ಚೆಗೆ ಗ್ರಾಸವಾಗಿದೆ.

ರಾಜ್ಯ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (DPAR) ಶಿಷ್ಟಾಚಾರ ವಿಭಾಗ ಈ ಕುರಿತು ಆದೇಶ ಹೊರಡಿಸಿದೆ. ಹೊಸ ಆದೇಶದ ಪ್ರಕಾರ, ಸಚಿವರು ಹಾಗೂ ಲೋಕಸಭೆ ಮತ್ತು ರಾಜ್ಯಸಭೆಯ ಸಂಸದರು ಅಧಿಕೃತ ಬಳಕೆಗಾಗಿ ಖರೀದಿಸುವ ಹೊಸ ಕಾರಿನ ಗರಿಷ್ಠ ಎಕ್ಸ್–ಶೋರೂಂ ಬೆಲೆ ಮಿತಿಯನ್ನು ?31 ಲಕ್ಷಕ್ಕೆ ನಿಗದಿಪಡಿಸಲಾಗಿದೆ. ಈ ಮೊತ್ತದಲ್ಲಿ ಜಿಎಸ್‌ಟಿ ಸೇರಿದೆ. ಈ ಹಿಂದೆ ಕಾರು ಖರೀದಿ ಮಿತಿ 26 ಲಕ್ಷವಿತ್ತು. 2022ರಲ್ಲಿ ಕೊನೆಯ ಬಾರಿಗೆ ಈ ಮಿತಿಯನ್ನು ಪರಿಷ್ಕರಿಸಲಾಗಿತ್ತು.

**ಒಂದೆಡೆ ಬರದ ಹೊಡೆತ, ಮತ್ತೊಂದೆಡೆ ಬೆಲೆ ಏರಿಕೆ ಆತಂಕ!**

ರಾಜ್ಯದಲ್ಲಿ ಬರದ ಸಂಕಷ್ಟದಿಂದ ರೈತಾಪಿ ವರ್ಗ ತತ್ತರಿಸಿದೆ. ಅನೇಕ ತಾಲೂಕುಗಳಲ್ಲಿ ಮಳೆ ಕೊರತೆ ಹಾಗೂ ಕೃಷಿ ನಷ್ಟದಿಂದ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸರ್ಕಾರ ಬರಪೀಡಿತ ತಾಲೂಕುಗಳನ್ನು ಘೋಷಿಸಿ, ಅರ್ಹ ರೈತರಿಗೆ ಪರಿಹಾರ ನೀಡುವ ಪ್ರಕ್ರಿಯೆ ಕೈಗೊಂಡಿದೆ. ಪ್ರತಿ ಅರ್ಹ ರೈತರಿಗೆ ?2,500 ಪರಿಹಾರ ನೀಡುವ ಘೋಷಣೆಯೂ ಮಾಡಲಾಗಿದ್ದು, ಪರಿಹಾರದ ಹಣ ವಿತರಣೆಯ ಸ್ಥಿತಿ ಮತ್ತು ಅರ್ಹತೆಯ ಆಧಾರದಲ್ಲಿ ರೈತರಿಗೆ ನೆರವು ತಲುಪಬೇಕಿದೆ.

ರೈತರು ಬೆಳೆ ನಷ್ಟ, ಕೃಷಿ ವೆಚ್ಚ ಹಾಗೂ ಜೀವನ ನಿರ್ವಹಣೆಯ ಸವಾಲುಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ, ಸಾಮಾನ್ಯ ಜನರಿಗೂ ಬೆಲೆ ಏರಿಕೆಯ ಆತಂಕ ಎದುರಾಗಿದೆ. ಹಾಲಿನ ದರ ಏರಿಕೆಯಾಗಬಹುದು ಎಂಬ ಚರ್ಚೆ ಗ್ರಾಹಕರಲ್ಲಿ ಆತಂಕ ಮೂಡಿಸಿದೆ. ಇದೇ ವೇಳೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್ ಪ್ರಯಾಣ ದರ ಹೆಚ್ಚಳದ ಸಾಧ್ಯತೆ ಇದೆ.

**ಜನರ ಜೇಬಿಗೆ ಕತ್ತರಿ, ಜನಪ್ರತಿನಿಧಿಗಳಿಗೆ ದುಬಾರಿ ಕಾರು!**

ಹಾಲು, ಸಾರಿಗೆ ಹಾಗೂ ದಿನನಿತ್ಯದ ಅಗತ್ಯಗಳ ವೆಚ್ಚ ಹೆಚ್ಚಾದರೆ ಅದರ ನೇರ ಹೊರೆ ಸಾಮಾನ್ಯ ಕುಟುಂಬಗಳ ಮೇಲೆ ಬೀಳುತ್ತದೆ. ವಿಶೇಷವಾಗಿ ಕಡಿಮೆ ಆದಾಯದ ಕುಟುಂಬಗಳು, ಕೂಲಿ ಕಾರ್ಮಿಕರು, ಸಣ್ಣ ವ್ಯಾಪಾರಿಗಳು ಮತ್ತು ಉದ್ಯೋಗಕ್ಕಾಗಿ ಪ್ರತಿದಿನ ಬಸ್‌ನಲ್ಲಿ ಸಂಚರಿಸುವವರು ಇಂತಹ ದರ ಏರಿಕೆಗಳಿಂದ ಹೆಚ್ಚು ತೊಂದರೆ ಅನುಭವಿಸಬಹುದು.



ಇಂತಹ ಪರಿಸ್ಥಿತಿಯಲ್ಲಿ ಸಚಿವರು ಮತ್ತು ಸಂಸದರಿಗೆ ಹೊಸ ಕಾರು ಖರೀದಿಸುವ ಮಿತಿಯನ್ನು 5 ಲಕ್ಷ ಹೆಚ್ಚಿಸಿರುವುದು ಸಾರ್ವಜನಿಕ ಚರ್ಚೆಗೆ ಕಾರಣವಾಗಿದೆ. ಸರ್ಕಾರದ ನಿರ್ಧಾರವನ್ನು ಆಡಳಿತಾತ್ಮಕ ಅಗತ್ಯಗಳ ದೃಷ್ಟಿಯಿಂದ ಸಮರ್ಥಿಸಬಹುದಾದರೂ, ಜನಸಾಮಾನ್ಯರ ಆರ್ಥಿಕ ಸಂಕಷ್ಟದ ಸಂದರ್ಭದಲ್ಲಿ ಸರ್ಕಾರಿ ವೆಚ್ಚದ ಆದ್ಯತೆಗಳ ಬಗ್ಗೆಯೂ ಪ್ರಶ್ನೆ ಉದ್ಭವಿಸಿದೆ.

**ಕಡಿಮೆ ಇಂಧನ ಬಳಕೆಯ ಕಾರು ಖರೀದಿಸಲು ಸೂಚನೆ**

ಹೊಸ ಕಾರುಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಕಡಿಮೆ ಇಂಧನ ಬಳಕೆ ಮತ್ತು ನಿರ್ವಹಣಾ ವೆಚ್ಚಕ್ಕೆ ಆದ್ಯತೆ ನೀಡುವಂತೆ ಸರ್ಕಾರ ಸೂಚಿಸಿದೆ. ಅಧಿಕೃತ ಕೆಲಸಗಳಿಗೆ ಬಳಸುವ ವಾಹನಗಳ ಖರೀದಿ ವೆಚ್ಚದ ಜತೆಗೆ, ಅವುಗಳ ದೀರ್ಘಕಾಲೀನ ನಿರ್ವಹಣಾ ವೆಚ್ಚವನ್ನೂ ಗಮನದಲ್ಲಿಟ್ಟುಕೊಳ್ಳುವಂತೆ ತಿಳಿಸಲಾಗಿದೆ.

ನಿಯಮಗಳ ಪ್ರಕಾರ, ಸಚಿವರು ಅಧಿಕೃತ ಕೆಲಸಗಳಿಗೆ ಬಳಸುವ ವಾಹನವನ್ನು ಮೂರು ವರ್ಷಗಳ ಬಳಿಕ ಅಥವಾ ಒಂದು ಲಕ್ಷ ಕಿಲೋಮೀಟರ್ ಸಂಚರಿಸಿದಾಗ, ಇವೆರಡರಲ್ಲಿ ಯಾವುದು ಮೊದಲು ಸಂಭವಿಸುತ್ತದೆಯೋ ಆ ಸಂದರ್ಭದಲ್ಲಿ ಬದಲಾಯಿಸಲು ಅವಕಾಶವಿದೆ.

2022ರಲ್ಲಿ ವಿವಿಧ ಹಂತದ ಸರ್ಕಾರಿ ಅಧಿಕಾರಿಗಳಿಗೆ ಹೊಸ ವಾಹನ ಖರೀದಿಸಲು ಪ್ರತ್ಯೇಕ ಮಿತಿಗಳನ್ನು ನಿಗದಿಪಡಿಸಲಾಗಿತ್ತು. ಅದರಂತೆ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿ ಮಟ್ಟದ ಇಲಾಖಾ ಮುಖ್ಯಸ್ಥರಿಗೆ 20 ಲಕ್ಷ ಮಿತಿ ನಿಗದಿಯಾಗಿತ್ತು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಹಾಗೂ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಿಗೆ 18 ಲಕ್ಷ ಮಿತಿಯಿತ್ತು. ಸಹಾಯಕ ಆಯುಕ್ತರು, ಉಪ ಪೊಲೀಸ್ ವರಿಷ್ಠಾಧಿಕಾರಿಗಳು ಸೇರಿದಂತೆ ಇತರ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ?12.50 ಲಕ್ಷ ಮಿತಿ ನಿಗದಿಪಡಿಸಲಾಗಿತ್ತು.

ಒಟ್ಟಿನಲ್ಲಿ, ಕರ್ನಾಟಕದಲ್ಲಿ ಬರದ ಸಂಕಷ್ಟ, ರೈತರ ಪರಿಹಾರ, ಅಗತ್ಯ ವಸ್ತುಗಳ ಬೆಲೆ ಏರಿಕೆ ಆತಂಕ ಮತ್ತು ಸಾರಿಗೆ ದರ ಹೆಚ್ಚಳದ ಚರ್ಚೆಗಳ ನಡುವೆಯೇ ಸಚಿವರು ಹಾಗೂ ಸಂಸದರ ಕಾರು ಖರೀದಿ ಮಿತಿ 31 ಲಕ್ಷಕ್ಕೆ ಏರಿಕೆಯಾಗಿದೆ.

ಜನಸಾಮಾನ್ಯರು ತಮ್ಮ ಆದಾಯದಲ್ಲಿ ಜೀವನ ನಿರ್ವಹಣೆಗೆ ಲೆಕ್ಕಾಚಾರ ಹಾಕುತ್ತಿರುವಾಗ, ಸರ್ಕಾರಿ ವಾಹನಗಳ ವೆಚ್ಚದ ಮಿತಿ ಹೆಚ್ಚಿಸಿರುವ ನಿರ್ಧಾರವು ಸರ್ಕಾರದ ಖರ್ಚಿನ ಆದ್ಯತೆಗಳ ಕುರಿತು ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ.

## ಹೆದ್ದಾರಿಗಳಲ್ಲಿ ರಾತ್ರಿ ಮಂಗಳಮುಖಿಯರು ನಿಲ್ಲದಂತೆ ಖಡಕ್ ಕ್ರಮ: ಅಧಿಕಾರಿಗಳಿಗೆ ಡಿಸಿ ದರ್ಶನ್ ಸೂಚನೆ

**ಮುಸ್ಸಂಜೆ ಸಮಯ,**

ಮಂಗಳೂರು:ರಾತ್ರಿ ವೇಳೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಂಗಳಮುಖಿಯರು ಅಕ್ರಮ ಚಟುವಟಿಕೆಗೆ ಪ್ರೋತ್ಸಾಹಿಸುವುದನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ದರ್ಶನ್ ಎಚ್.ವಿ ಸೂಚನೆ ನೀಡಿದ್ದಾರೆ.

ಜಿಲ್ಲಾಧಿಕಾರಿ ಶುಕ್ರವಾರ ಕಚೇರಿಯಲ್ಲಿ ನಡೆದ ಲಿಂಗತ್ವ ಅಲ್ಪಸಂಖ್ಯಾತರ ಜಿಲ್ಲಾ ಮಟ್ಟದ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಈ ನಿರ್ದೇಶನ ನೀಡಿದ್ದಾರೆ.

ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ವೇಳೆ ಮಂಗಳಮುಖಿಯರು ನಿಂತು ವಾಹನ ಸವಾರರಿಗೆ ತೊಂದರೆ ಮಾಡುವ ಬಗ್ಗೆ ಹಲವಾರು ದೂರುಗಳು ಕೇಳಿ ಬಂದಿವೆ. ಈ ನಿಟ್ಟಿನಲ್ಲಿ ಆರಂಭಿಕ ಹಂತದಲ್ಲಿ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಲ್ಲದಂತೆ ಅರಿವು ಮೂಡಿಸಬೇಕು. ಮುಂದಿನ ದಿನಗಳಲ್ಲಿ ಇದೇ ರೀತಿ ಸಮಸ್ಯೆ ಮುಂದುವರಿದರೆ ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಸೂಚಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಟ್ರಾನ್ಸ್‌ಜೆಂಡರ್ ಸಂಘಟನೆಗಳ ಪ್ರತಿನಿಧಿಗಳು ಮಾತನಾಡಿ, ಹೊರರಾಜ್ಯದ ಮಂಗಳಮುಖಿಯರು ಮಂಗಳೂರಿಗೆ ಬಂದು ಅಕ್ರಮ ಚಟುವಟಿಕೆಗಳಲ್ಲಿ ತೊಡಗುತ್ತಿದ್ದು,



ಅವರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಹೇಳಿದರು. ಮಂಗಳಮುಖಿಯರಿಗೆ ವಸತಿ ನಿವೇಶನ ಒದಗಿಸಲು 15 ಮಂದಿ ನಿವೇಶನ ರಹಿತರ ಪಟ್ಟಿಯನ್ನು ಮಹಾನಗರಪಾಲಿಕೆಗೆ ನೀಡಲಾಗಿದೆ. ಇವರಿಗೆ ಮಹಿಳಾ ಅಭಿವೃದ್ಧಿ ನಿಗಮದಿಂದ ಸ್ವ ಉದ್ಯೋಗ ಕೈಗೊಳ್ಳಲು ಪ್ರೋತ್ಸಾಹಧನ ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಇತ್ತೀಚೆಗೆ ನಡೆದ ಸರ್ವೆಯಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 96 ಟ್ರಾನ್ಸ್‌ಜೆಂಡರ್ ವ್ಯಕ್ತಿಗಳು ನೋಂದಾಯಿಸಿರುತ್ತಾರೆ. ಇವರಿಗೆ ಪುನರ್ವಸತಿ ಒದಗಿಸಲು ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಾಡೆ ವಿನಾಯಕ ಕಾರ್ಬಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಶ್ರೀಧರ್, ಮಂಗಳಮುಖಿ ಸಂಘಟನೆಗಳ ಪ್ರತಿನಿಧಿಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಪ್ರೀತಿಸಿ ಮದುವೆಯಾಗಿದ್ದ ದಂಪತಿಯ ದುರಂತ ಅಂತ್ಯ; ನದಿಯೊಳಗೆ ಕಾಲಿಗೆ ಸರಪಳಿ ಕಟ್ಟಿದ ಸ್ಥಿತಿಯಲ್ಲಿ ಶವ ಪತ್ತೆ



**ಮುಸ್ಸಂಜೆ ಸಮಯ,**

ಮುಂಬೈ,: ಮಹಾರಾಷ್ಟ್ರದ ಧುಳೆ ಜಿಲ್ಲೆಯ ಸಾಲ್ವಡೆ ಪ್ರದೇಶದ ತಾಪಿ ನದಿಯಲ್ಲಿ ನವದಂಪತಿಯ ಮೃತದೇಹಗಳು ಕಾಲುಗಳಿಗೆ ಕಬ್ಬಿಣದ ಸರಪಳಿ ಮತ್ತು ಬೀಗ ಜಡಿದ ಸ್ಥಿತಿಯಲ್ಲಿ ಪತ್ತೆಯಾಗಿವೆ. ಈ ಪ್ರಕರಣಕ್ಕೆ ಸಂಬಂಧಿಸಿದ ವಿವರವಾದ ಮಾಹಿತಿ ಇಲ್ಲಿದೆ. ಮೃತರನ್ನು ಶ್ಯಾಮ್ ಹರಿ ಪಾಟೀಲ್ ಮತ್ತು ಸಪ್ನಾ ಪಾಟೀಲ್ ಎಂದು ಗುರುತಿಸಲಾಗಿದೆ.

ಇಬ್ಬರೂ ಜಲಗಾಂವ್ ಜಿಲ್ಲೆಯ ಅಮಲ್ನೇರ್ ತಾಲೂಕಿನ ಮೂಲದವರಾಗಿದ್ದು, ಕೆಲವು ತಿಂಗಳ ಹಿಂದೆಯಷ್ಟೇ ಪ್ರೀತಿಸಿ ವಿವಾಹವಾಗಿದ್ದರು.

ತಾಪಿ ನದಿಯ ತಳಭಾಗದಲ್ಲಿ ಇಬ್ಬರ ಮೃತದೇಹಗಳು ಪತ್ತೆಯಾಗಿದ್ದು, ಇಬ್ಬರ ಕಾಲುಗಳನ್ನು ಒಂದಕ್ಕೊಂದು ಸೇರಿಸಿ ಕಬ್ಬಿಣದ ಸರಪಳಿಯಿಂದ ಕಟ್ಟಿ, ಅದಕ್ಕೆ ಬೀಗ ಜಡಿಯಲಾಗಿತ್ತು. ಈ ಘಟನೆ ಪೊಲೀಸ್ ಆಡಳಿತ ಸೇರಿದಂತೆ ಸ್ಥಳೀಯ ಜನರನ್ನು ಬೆಚ್ಚಿಬೀಳಿಸಿದೆ. ಅತ್ಯಂತ ಆಘಾತಕಾರಿ ಸಂಗತಿಯೆಂದರೆ, ಶವಗಳನ್ನು ತಾಪಿ ನದಿಯಿಂದ ಹೊರತೆಗೆದಾಗ ಇಬ್ಬರ ಕಾಲುಗಳಿಗೆ ಕಬ್ಬಿಣದ ಸರಪಳಿಯನ್ನು ಕಟ್ಟಲಾಗಿತ್ತು ಮತ್ತು ಆ ಸರಪಳಿಗೆ ಬೀಗ ಹಾಕಲಾಗಿತ್ತು. ಗಂಡ ಮತ್ತು ಹೆಂಡತಿ



ಇಬ್ಬರನ್ನೂ ಒಂದೇ ಸರಪಳಿಯಿಂದ ಕಟ್ಟಿ ಬೀಗ ಹಾಕಲಾಗಿತ್ತು. ಈ ವಿಚಿತ್ರ ಪರಿಸ್ಥಿತಿಯಿಂದಾಗಿ, ಇದು ಆತ್ಮಹತ್ಯೆಯೇ ಅಥವಾ ಇಬ್ಬರನ್ನು ಕ್ರೂರವಾಗಿ ಕೊಲೆ ಮಾಡಿ ಶವಗಳನ್ನು ನದಿಗೆ ಎಸೆಯಲಾಗಿದೆಯೇ ಎಂಬ ಬಗ್ಗೆ ಹಲವು ವಾದಗಳು ಕೇಳಿಬರುತ್ತಿವೆ.

ಈ ಘಟನೆ ಬೆಳಕಿಗೆ ಬಂದ ತಕ್ಷಣ ಸ್ಥಳೀಯ ನಾಗರಿಕರು ಪೊಲೀಸರಿಗೆ ಮಾಹಿತಿ ನೀಡಿದರು. ಮಾಹಿತಿ ಪಡೆದ ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ಮೃತದೇಹಗಳನ್ನು ತಾಪಿ ನದಿಪಾತ್ರದಿಂದ ಹೊರತೆಗೆದು ಮರಣೋತ್ತರ ಪರೀಕ್ಷೆಗಾಗಿ ನರ್ದಾನದ ಗ್ರಾಮೀಣ ಆಸ್ಪತ್ರೆಗೆ ದಾಖಲಿಸಲಾಗಿದೆ.ಈ ಅನುಮಾನಾಸ್ಪದ ಘಟನೆಯ ಕುರಿತು ನರ್ದಾನ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆಯನ್ನು ತ್ವರಿತಗತಿಯಲ್ಲಿ ಪ್ರಾರಂಭಿಸಿದ್ದಾರೆ. ಈ ದಂಪತಿಗಳ ಸಾವಿಗೆ ನಿಖರವಾದ ಕಾರಣವೇನು? ಈ ತೀವ್ರ ಕ್ರಮ ಕೈಗೊಳ್ಳಲು ಅವರಿಗೆ ಯಾವುದೇ ಅಪಘಾತ ಕಾರಣವೇ ಎಂಬುದನ್ನು ನಿರ್ಧರಿಸಲು ನರ್ದಾನ ಪೊಲೀಸ್ ತಂಡವು ಎಲ್ಲಾ ಕೋನಗಳಿಂದಲೂ ಸಂಪೂರ್ಣ ತನಿಖೆ ನಡೆಸುತ್ತಿದೆ.

## ಮೃತದೇಹ ಎಸೆಯೋ ಐಡಿಯಾ ಕೊಟ್ಟ PSI, ACP ಗೆ ಬಿಗ್ ಚಾಲೆಂಜ್, ರೇಣುಕಾಸ್ವಾಮಿ ಕೇಸ್ ತನಿಖಾ ತಂಡದ ವಿರುದ್ಧವೇ ಇಲಾಖಾ ತನಿಖೆ

**ಮುಸ್ಸಂಜೆ ಸಮಯ,**

ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಅಂಡ್ ಗ್ಯಾಂಗ್ ಸಂಕಷ್ಟದಲ್ಲಿದೆ. ಆದರೆ ಈಗ ಪ್ರಕರಣದ ತನಿಖಾ ತಂಡಕ್ಕೆ ಕೂಡಾ ಸಂಕಷ್ಟ ಎದುರಾಗುವ ಸಾಧ್ಯತೆ ಕಂಡು ಬಂದಿದೆ. ಪ್ರದೂಷ್ ಮಾಫಿ ಸಾಕ್ಷಿ ಹೇಳಿಕೆ ಬೆನ್ನಲ್ಲೆ ಪಿಎಸ್‌ಐ ವಿನಯ್‌ಗೆ ಸಂಕಷ್ಟ ಎದುರಾಗಲಿದೆಯಾ?

**ಪ್ರಕರಣದ ತನಿಖೆ ಪ್ರಶ್ನಿಸಿ ದೂರು**

ಮಾಫಿ ಸಾಕ್ಷಿ ಪ್ರಕ್ರಿಯೆ ನಡೆದು ಇನ್ನು ಕ್ರಾಸ್ ಎಕ್ಸಾಮಿನೇಷನ್ ನಡೆಯಬೇಕಿರುವ ಹೊತ್ತಿನಲ್ಲಿ ಪ್ರಕರಣದ ತನಿಖೆ ಪ್ರಶ್ನಿಸಿ ದೂರು ಸಲ್ಲಿಸಲಾಗಿರುವುದು ಇಡೀ ಕೇಸ್‌ನಲ್ಲಿ ದೊಡ್ಡ ಟ್ವಿಸ್ಟ್ ಕೊಟ್ಟಿದೆ.

ಜಂಟಿ ಪೊಲೀಸ್ ಆಯುಕ್ತ ವಂಶಿ ಕೃಷ್ಣ ನೇತೃತ್ವದಲ್ಲಿ ಇಲಾಖಾ ತನಿಖೆಗೆ ಸೂಚನೆ ನೀಡಲಾಗಿದೆ. ತನಿಖಾಧಿಕಾರಿ ಎಸಿಪಿ ಚಂದನ್ ಹಾಗೂ ಪಿಎಸ್‌ಐ ವಿನಯ್ ವಿರುದ್ಧ ಇಲಾಖಾ ತನಿಖೆ ನಡೆಯಲಿದೆ.

ಸ್ನೇಹಮಯಿ ಕೃಷ್ಣ ತನಿಖೆಯಲ್ಲಿನ ಲೋಪ ದೋಷಗಳ ಸಂಬಂಧವಾಗಿ ದೂರು ನೀಡಿದ್ದರು. ತನಿಖೆಯಲ್ಲಿ ಹಲವು ಸಾಕ್ಷಿಗಳನ್ನ ಸೃಷ್ಟಿಸಲಾಗಿದೆ. ಪಿಎಸ್‌ಐ ವಿನಯ್‌ನನ್ನು ಆರೋಪಿ ಸ್ಥಾನದಿಂದ ತಪ್ಪಿಸಲಾಗಿದೆ ಎಂದು ಆರೋಪಿಸಿ ದೂರು ನೀಡಿದ್ದರು.




ಡಿಜಿ & ಐಜಿ ಡಾ. ಎಂ ಸಲೀಂಗೆ ಸ್ನೇಹಮಯಿ ಕೃಷ್ಣ ದೂರು ನೀಡಿದ್ದು, ದೂರಿನ ಬಗ್ಗೆ ಪರಿಶೀಲನೆ ನಡೆಸುವಂತೆ ಬೆಂಗಳೂರು ಕಮಿಷನರ್ ಗೆ ಸೂಚನೆ ನೀಡಲಾಗಿದೆ. ಸದ್ಯ ಡಿಜಿ & ಐಜಿ ಸೂಚನೆ ಮೇರೆಗೆ ಕಮಿಷನರ್‌ಯಿಂದ ಇಲಾಖಾ ತನಿಖೆಗೆ ಆದೇಶ ನೀಡಲಾಗಿದೆ.

**ಜಂಟಿ ಪೊಲೀಸ್ ಕಮಿಷನರ್ ವಂಶಿಕೃಷ್ಣಗೆ ತನಿಖೆಯ ಜವಬ್ದಾರಿ**

ಪಿಎಸ್‌ಐ ವಿನಯ್‌ನನ್ನು ಆರೋಪಿ ಪಟ್ಟಿಗೆ ಸೇರಿಸುವಂತೆ ದೂರು ನೀಡಲಾಗಿತ್ತು. ಪಿಎಸ್‌ಐ ಅಣತಿಯಂತೆ ಆರೋಪಿಗಳು ಮೃತದೇಹ ಬಿಸಾಡಿದ್ದರು. ಹೀಗಾಗಿ ವಿನಯ್ ಕೂಡ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪ ಕೇಳಿ ಬಂದಿದೆ.

ಪ್ರಕರಣದ ತನಿಖಾಧಿಕಾರಿ ಎಸಿಪಿ ಚಂದನ್ ಲೋಪ ಎಸಗಿರುವ ಆರೋಪ ಕೇಳಿ ಬಂದಿದ್ದು ಪ್ರಕರಣದಲ್ಲಿ ಸುಳ್ಳು ಸಾಕ್ಷಿಗಳನ್ನ ಸೃಷ್ಟಿಸಿದ್ದಾರೆ ಎಂದಿದ್ದಾರೆ. ಹೀಗಾಗಿ ಇಲಾಖೆಯ ಅಂತರಿಕ ತನಿಖೆ ಮಾಡುವಂತೆ ಮನವಿ ಮಾಡಲಾಗಿತ್ತು.

ಸದ್ಯ ತನಿಖಾ ತಂಡದ ವಿರುದ್ಧವೇ ಜಂಟಿ ಪೊಲೀಸ್ ಆಯುಕ್ತರು ಇಲಾಖಾ ತನಿಖೆಗೆ ಮುಂದಾಗಿದ್ದಾರೆ.

## ಬೆಂಗಳೂರು: ಬ್ರಿಗೇಡ್ ರಸ್ತೆ ಲೇಡಿಸ್ ಪಬ್‌ಗಳ ಮೇಲೆ ಪೊಲೀಸರ ದಿಢೀರ್ ದಾಳಿ

**ಮುಸ್ಸಂಜೆ ಸಮಯ,**

ಬೆಂಗಳೂರು: ಬೆಂಗಳೂರಿನ ಬ್ರಿಗೇಡ್ ರಸ್ತೆಯಲ್ಲಿರುವ ಲೇಡಿಸ್ ಪಬ್‌ಗಳ ಮೇಲೆ ಶುಕ್ರವಾರ ತಡರಾತ್ರಿ ಪೊಲೀಸ್ ದಾಳಿ ನಡೆದಿದೆ. ಖುದ್ದು ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಅವರ ನೇತೃತ್ವದಲ್ಲಿ ಈ ದಾಳಿ ನಡೆದಿದ್ದು, ಬ್ರಿಗೇಡ್ ಗಾರ್ಡನ್, ಪೇಜ್ ತ್ರೀ ಪಬ್ ಸೇರಿದಂತೆ ಹಲವು ಪಬ್‌ಗಳಲ್ಲಿ ಪರಿಶೀಲನೆ ನಡೆಸಲಾಗಿದೆ.

ಪೊಲೀಸ್ ಇಲಾಖೆ ಮತ್ತು ಸಿಸಿಬಿ ಅಧಿಕಾರಿಗಳ ತಂಡ ಈ ಶೋಧ ಕಾರ್ಯಾಚರಣೆಯಲ್ಲಿ ಭಾಗವಹಿಸಿತ್ತು.

ಪಬ್‌ಗಳು ನಿಯಮಾನುಸಾರ ಕಾರ್ಯನಿರ್ವಹಿಸುತ್ತಿವೆಯೇ, ಅದರಲ್ಲೂ ವಿಶೇಷವಾಗಿ ನಿಗದಿತ ಸಮಯಕ್ಕೆ ಸರಿಯಾಗಿ ಬಂದ್ ಆಗುತ್ತಿವೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವುದು




ದಾಳಿಯ ಮುಖ್ಯ ಉದ್ದೇಶವಾಗಿತ್ತು. 'ಪಬ್‌ಗಳಿಗೆ ಸಮಯ ನಿಗದಿಪಡಿಸಲಾಗಿದೆ, ಆ ಸಮಯದೊಳಗೆ ಎಲ್ಲವೂ ಮುಚ್ಚಬೇಕು ಎಂದು ಸೂಚನೆಗಳಿವೆ. ನಾವು ಅದನ್ನು ಪರಿಶೀಲಿಸಲು ಬಂದಿದ್ದೇವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅಲ್ಲದೆ, ಪಬ್‌ಗಳಲ್ಲಿ ಅಪ್ರಾಪ್ತರಿಗೆ ಮದ್ಯ ನೀಡಲಾಗುತ್ತಿದೆಯೇ ಎಂಬುದರ ಬಗ್ಗೆ ಹಾಗೂ ಅಕ್ರಮ ಚಟುವಟಿಕೆಗಳ ಬಗ್ಗೆಯೂ ಪರಿಶೀಲನೆ ನಡೆಸಲಾಗಿದೆ. ಪಬ್‌ಗಳು ಮುಚ್ಚಿದ ನಂತರ ಜನರಿಂದ ರಸ್ತೆಗಳಲ್ಲಿ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವ ಕುರಿತು ಚರ್ಚಿಸಲಾಗಿದೆ. ಸಾರ್ವಜನಿಕರಿಗೆ ಯಾವುದೇ ಅನಾನುಕೂಲವಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

## ಪ್ರಾಣ ಹೋಗುತ್ತಿದ್ದರೂ ಸ್ಟೇರಿಂಗ್ ಬಿಡದ ರಿಯಲ್ ಹೀರೋ: 40 ಪ್ರಯಾಣಿಕರ ಜೀವ ಉಳಿಸಿ ಅಮರನಾದ ಸಾರಿಗೆ ಬಸ್ ಚಾಲಕ

**ಮುಸ್ಸಂಜೆ ಸಮಯ,**

ತೀವ್ರ ಎದೆನೋವಿನಿಂದ ಪ್ರಾಣ ಹೋಗುತ್ತಿದೆ ಎಂದು ತಿಳಿದಿದ್ದರೂ, ತನ್ನನ್ನು ನಂಬಿ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದವರ ಜೀವ ಉಳಿಸಬೇಕೆಂಬ ಉದ್ದೇಶದಿಂದ ಕೊನೆಯ ಕ್ಷಣದವರೆಗೂ ಸ್ಟಿರಿಂಗ್ ಬಿಡದೆ ಕರ್ತವ್ಯ ನಿರ್ವಹಿಸಿದ ನಿಜವಾದ ಹೀರೋ ಒಬ್ಬರು. ತಾನು ಪ್ರಾಣ ಬಿಟ್ಟರೂ ಪರವಾಗಿಲ್ಲ, ಪ್ರಯಾಣಿಕರಿಗೆ ಯಾವುದೇ ಅಪಾಯವಾಗಬಾರದು ಎಂಬ ಕಾಳಜಿಯಿಂದ ಬಸ್ಸನ್ನು ಸುರಕ್ಷಿತವಾಗಿ ಬದಿಗೆ ನಿಲ್ಲಿಸಿ, 40 ಮಂದಿಯ ಜೀವ ಉಳಿಸಿದ ಬಳಿಕ ಚಾಲಕ ಸೀಟಿನಲ್ಲೇ ಕುಸಿದು ಪ್ರಾಣಬಿಟ್ಟಿದ್ದಾರೆ.

ಈ ಹೃದಯವಿದ್ರಾವಕ ಘಟನೆ ಆಂಧ್ರಪ್ರದೇಶದ ಅನಕಾಪಲ್ಲಿ ಜಿಲ್ಲೆಯಲ್ಲಿ ನಡೆದಿದೆ. ಚಾಲಕನ ಕರ್ತವ್ಯನಿಷ್ಠೆ ಮತ್ತು ಮಾನವೀಯತೆಗೆ ಸಾಕ್ಷಿಯಾದ ಈ ಘಟನೆ ಎಲ್ಲರ ಮನಕಲಕಿದೆ.

**ಏನಿದು ಘಟನೆ**

ಕಾಕಿನಾಡದಿಂದ ವಿಶಾಖಪಟ್ಟಣಕ್ಕೆ ತೆರಳುತ್ತಿದ್ದ ಎಪಿಎಸ್‌ಆರ್‌ಟಿಸಿ (APSRTC) ನಾನ್‌ಸ್ಟಾಪ್ ಎಕ್ಸ್‌ಪ್ರೆಸ್ ಬಸ್ಸಿನಲ್ಲಿ 40 ಪ್ರಯಾಣಿಕರು ಇದ್ದರು. ಬಸ್ಸನ್ನು ಚಾಲನೆ ಮಾಡುತ್ತಿದ್ದ ಚಾಲಕ ಜೆಟ್ಟಿ ಶಿವ ಅವರಿಗೆ ತುನಿ ಬಳಿ ಎದೆನೋವು ಕಾಣಿಸಿಕೊಂಡಿತ್ತು. ಆದರೂ ನೋವನ್ನು ಸಹಿಸಿಕೊಂಡು ನಕ್ಕಪಲ್ಲಿ ವರೆಗೆ ಬಸ್ಸು ಚಲಾಯಿಸಿದರು.

ನಕ್ಕಪಲ್ಲಿ ಬಳಿ ಎದೆನೋವು ತೀವ್ರಗೊಂಡಾಗಲೂ ಅವರು ಪ್ರಯಾಣಿಕರ ಸುರಕ್ಷತೆಯನ್ನೇ ಮೊದಲ ಆದ್ಯತೆಯಾಗಿ ಪರಿಗಣಿಸಿದರು. ಬಸ್ಸಿನ ಮೇಲಿನ ನಿಯಂತ್ರಣ ಕಳೆದುಕೊಳ್ಳದೆ, ಸುರಕ್ಷಿತ ಸ್ಥಳದಲ್ಲಿ ಬಸ್ಸನ್ನು ನಿಲ್ಲಿಸಿದರು. ಬಳಿಕ ಚಾಲಕನ ಸೀಟಿನಲ್ಲೇ ಕುಸಿದುಬಿದ್ದರು.

ಚಾಲಕನಿಗೆ ಪ್ರಯಾಣಿಕರು ಸಿಪಿಆರ್ (CPR) ನೀಡಿ ಆಸ್ಪತ್ರೆಗೆ ಕರೆದೊಯ್ದರು. ಆದರೆ, ಅಷ್ಟರಲ್ಲಾಗಲೇ ಅವರು ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದರು. ತಮ್ಮ ಪ್ರಾಣವನ್ನು ಕಳೆದುಕೊಂಡರೂ 40 ಪ್ರಯಾಣಿಕರ ಜೀವ ಉಳಿಸಿದ ಚಾಲಕ ಜೆಟ್ಟಿ ಶಿವ ಅವರ ಕರ್ತವ್ಯನಿಷ್ಠೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

**ಎಪಿಎಸ್‌ಆರ್‌ಟಿಸಿ ಅಧ್ಯಕ್ಷರಿಂದ ತೀವ್ರ ಸಂತಾಪ**

ಈ ದುರ್ಘಟನೆಗೆ ಸಂಬಂಧಿಸಿದಂತೆ ಎಪಿಎಸ್‌ಆರ್‌ಟಿಸಿ ಅಧ್ಯಕ್ಷ ಕೊಣಕಳ್ಳ ನಾರಾಯಣರಾವ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಕಾಕಿನಾಡದಿಂದ




ವಿಶಾಖಪಟ್ಟಣಕ್ಕೆ ತೆರಳುತ್ತಿದ್ದ ಬಸ್ಸಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಲಕ ಜೆಟ್ಟಿ ಶಿವ ಅವರು ಹೃದಯಾಘಾತಕ್ಕೆ ಒಳಗಾದರೂ, ಕೊನೆಯ ಕ್ಷಣಗಳಲ್ಲಿಯೂ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿದರು.

ಬಸ್ಸನ್ನು ಸುರಕ್ಷಿತವಾಗಿ ನಿಲ್ಲಿಸುವ ಮೂಲಕ ಸುಮಾರು 40 ಪ್ರಯಾಣಿಕರನ್ನು ದೊಡ್ಡ ಅಪಾಯದಿಂದ ಪಾರು ಮಾಡಿ ಪ್ರಾಣ ಕಳೆದುಕೊಂಡಿರುವುದು ಅತ್ಯಂತ ದುಃಖಕರ ಸಂಗತಿ ಎಂದು ಅವರು ಹೇಳಿದ್ದಾರೆ.

ತೀವ್ರ ಅಸ್ವಸ್ಥತೆಯ ನಡುವೆಯೂ ಬಸ್ಸಿನ ಮೇಲಿನ ನಿಯಂತ್ರಣ ಕಳೆದುಕೊಳ್ಳದೆ, ಸಮಯಪ್ರಜ್ಞೆಯಿಂದ ವರ್ತಿಸಿ ಪ್ರಯಾಣಿಕರಿಗೆ ಯಾವುದೇ ಅಪಾಯವಾಗದಂತೆ ನೋಡಿಕೊಂಡಿರುವುದು ಜೆಟ್ಟಿ ಶಿವ ಅವರ ಜವಾಬ್ದಾರಿಯುತ ಕರ್ತವ್ಯನಿಷ್ಠೆ ಮತ್ತು ಸೇವಾ ಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದು ಅಧ್ಯಕ್ಷರು ಶ್ಲಾಘಿಸಿದ್ದಾರೆ.

ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಿದ ಜೆಟ್ಟಿ ಶಿವ ಅವರ ಸೇವಾ ಮನೋಭಾವ ಎಪಿಎಸ್‌ಆರ್‌ಟಿಸಿಯ ಪ್ರತಿಯೊಬ್ಬ ಉದ್ಯೋಗಿಗೂ ಆದರ್ಶಪ್ರಾಯವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

**ಕುಟುಂಬಕ್ಕೆ ನೆರವು ನೀಡುವ ಭರವಸೆ**

ಜೆಟ್ಟಿ ಶಿವ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ ಎಪಿಎಸ್‌ಆರ್‌ಟಿಸಿ ಅಧ್ಯಕ್ಷ ಕೊಣಕಳ್ಳ ನಾರಾಯಣರಾವ್, ಮೃತರ ಕುಟುಂಬದ ಸದಸ್ಯರಿಗೆ ಪ್ರಗಾಢ ಸಂತಾಪ ತಿಳಿಸಿದ್ದಾರೆ.

ಈ ದುಃಖದ ಸಂದರ್ಭದಲ್ಲಿ ಎಪಿಎಸ್‌ಆರ್‌ಟಿಸಿ ಆಡಳಿತ ಮಂಡಳಿಯು ಕುಟುಂಬಕ್ಕೆ ಎಲ್ಲ ರೀತಿಯಲ್ಲೂ ಬೆಂಬಲವಾಗಿ ನಿಲ್ಲಲಿದೆ. ನಿಯಮಗಳ ಪ್ರಕಾರ ಅಗತ್ಯ ನೆರವು ಮತ್ತು ಸಹಕಾರ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದ್ದಾರೆ.

ಜೆಟ್ಟಿ ಶಿವ ಅವರು ಸಲ್ಲಿಸಿದ ಸೇವೆಯನ್ನು ಸಂಸ್ಥೆ ಎಂದಿಗೂ ಮರೆಯುವುದಿಲ್ಲ. ಅವರ ಕುಟುಂಬಕ್ಕೆ ಎಪಿಎಸ್‌ಆರ್‌ಟಿಸಿ ವತಿಯಿಂದ ಎಲ್ಲ ರೀತಿಯ ಸಹಕಾರ ನೀಡಲಾಗುವುದು ಎಂದು ಅಧ್ಯಕ್ಷರು ಭರವಸೆ ನೀಡಿದ್ದಾರೆ.

ತಮ್ಮ ಪ್ರಾಣವನ್ನೇ ಪಣಕ್ಕಿಟ್ಟು 40 ಪ್ರಯಾಣಿಕರ ಜೀವ ಉಳಿಸಿದ ಚಾಲಕ ಜೆಟ್ಟಿ ಶಿವ ಅವರ ಕರ್ತವ್ಯನಿಷ್ಠೆ ನಿಜಕ್ಕೂ ಶ್ಲಾಘನೀಯ. ಅವರ ಈ ತ್ಯಾಗ ಮತ್ತು ಸೇವಾ ಮನೋಭಾವ ಸಾರಿಗೆ ಕ್ಷೇತ್ರದ ಸಿಬ್ಬಂದಿಗೆ ಸದಾ ಪ್ರೇರಣೆಯಾಗಿರಲಿದೆ.

## ಚಾಕುವಿನಿಂದ ಇರಿದು ಮಹಿಳೆ ಕೊಲೆ: ಐದು ಮಕ್ಕಳ ತಾಯಿಯ ಬರ್ಬರ ಹತ್ಯೆಗೆ ಆಕ್ರೋಶ!

**ಮುಸ್ಸಂಜೆ ಸಮಯ,**

ಹೈದರಾಬಾದ್: ಹೈದರಾಬಾದ್‌ನ ಅಜಾಂಪುರ ಸಮೀಪ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ತಾಹೇರಾ ಬಾನು ಎಂಬ ಮಹಿಳೆಯನ್ನು ಶುಕ್ರವಾರ ರಾತ್ರಿ ದುಷ್ಕರ್ಮಿಯೊಬ್ಬರು ಚಾಕುವಿನಿಂದ ಇರಿದು ಬರ್ಬರ ಹತ್ಯೆ ಮಾಡಿರುವ ಆಘಾತಕಾರಿ ಘಟನೆ ವರದಿಯಾಗಿದೆ.

ಚಂಚಲಗುಡ ನಿವಾಸಿಯಾದ ಮೃತ ತಾಹೇರಾ ಬಾನು ಅವರು ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದರು.

ರಾತ್ರಿ 8 ಗಂಟೆಯಿಂದ 9:30ರ ನಡುವೆ ಈ ಕೃತ್ಯ ನಡೆದಿದ್ದು, ಪರಿಚಿತ ವ್ಯಕ್ತಿಯೊಬ್ಬ ಬಾನು ಅವರ ಬಳಿ ಬಂದು ಮಾತನಾಡಿ ನಂತರ ವಾಗ್ವಾದಕ್ಕಿಳಿದು ಹಲವು ಬಾರಿ ಚಾಕುವಿನಿಂದ ಇರಿದು ಪರಾರಿಯಾಗಿ




ದ್ದಾನೆ ಎಂದು ಪ್ರಾಥಮಿಕ ಪೊಲೀಸ್ ತನಿಖೆಯಿಂದ ತಿಳಿದುಬಂದಿದೆ.

ಪೊಲೀಸರ ಮಾಹಿತಿ ಪ್ರಕಾರ, ಗಂಭೀರವಾಗಿ ಗಾಯಗೊಂಡಿದ್ದ ಮಹಿಳೆಯನ್ನು ಕೂಡಲೇ ಆಸ್ಪತ್ರೆಗೆ ಸಾಗಿಸಲಾಗಿದ್ದು, ಅಷ್ಟರಲ್ಲಿ ಅವರು ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ.

ಚಾರ್ಮಿನಾರ್ ವಲಯದ ಡಿಸಿಪಿ ಕಿರಣ್ ಖರೆ ನೇತೃತ್ವದಲ್ಲಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಫೋರೆನ್ಸಿಕ್ ಸಾಕ್ಷ್ಯಗಳು, ರಕ್ತದ ಮಾದರಿಗಳು ಮತ್ತು ಹತ್ಯೆಗೆ ಬಳಸಿದ ಶಂಕಿತ ಆಯುಧವನ್ನು ವಶಪಡಿಸಿಕೊಂಡಿದ್ದಾರೆ.

ಅಲ್ಲದೆ, ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿದ್ದು, ಹತ್ಯೆಗೂ ಮುನ್ನ ಕಿರುಕುಳ ನೀಡಿರುವ ಬಗ್ಗೆಯೂ ತನಿಖೆ ಮುಂದುವರಿದಿದೆ.

ಮುಸ್ಸಂಜೆ ಸಮಯ
10 ಶನಿವಾರ ಅಕ್ಟೋಬರ್ 2026
10 Saturday Octo. 2026

# ರಾಜ್ಯದ ಯಜಮಾನಿಯರಿಗೆ ಬಿಗ್ ಶಾಕ್ : ಅರ್ಜಿ ನಿಯಮದಲ್ಲಿ ಬದಲಾವಣೆ : ಹಣ ಪಡೆಯಲು ಈ ದಾಖಲೆಗಳು ಕಡ್ಡಾಯ!

**ಮುಸ್ಸಂಜೆ ಸಮಯ,**

ಬೆಂಗಳೂರು : ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷಿ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮಿ' ಯೋಜನೆಯ ನಿಯಮಗಳಲ್ಲಿ ಮಹತ್ವದ ಬದಲಾವಣೆಗಳನ್ನು ತರಲಾಗಿದ್ದು, ಇನ್ನುಂದೆ ಮಾಸಿಕ ಎರಡು ಸಾವಿರ ರೂಪಾಯಿ ನೆರವು ಪಡೆಯಲು ಫಲಾನುಭವಿಗಳು ಕೆಲವೊಂದು ಹೊಸ ಮಾರ್ಗಸೂಚಿಗಳನ್ನು ಪಾಲಿಸುವುದು ಕಡ್ಡಾಯವಾಗಿದೆ.

ಸರ್ಕಾರದ ಗ್ಯಾರಂಟಿ ಯೋಜನೆಗಳ ಮರುಪರಿಷ್ಕರಣೆ ಹಾಗೂ ಹಿಂದಿನ ಲೋಪಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಹೊಸ ನಿಯಮಗಳ ಅಡಿಯಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಲು ಶೀಘ್ರದಲ್ಲೇ ಮನೆಮನೆ ಸಮೀಕ್ಷೆ ಹಾಗೂ ಸರ್ವೆ ಕಾರ್ಯ ಆರಂಭವಾಗಲಿದೆ.

ಮರುಪರಿಶೀಲನಾ ಪ್ರಕ್ರಿಯೆಯ ಭಾಗವಾಗಿ ವಿಶೇಷ ಆಪ್ ಹಾಗೂ ಆಫ್‌ಲೈನ್ ಅರ್ಜಿಗಳ ಮೂಲಕ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ಎಸ್‌ಐಆರ್ ಮಾದರಿಯಲ್ಲೇ ಈ ಸಮೀಕ್ಷೆ ನಡೆಯಲಿದ್ದು, ಆಯಪ್‌ನಲ್ಲಿ ಡಿಜಿಟಲ್ ನಮೂನೆ ಭರ್ತಿಯಾದರೂ ಭೌತಿಕವಾದ ಆಫ್‌ಲೈನ್ ಮರುಪರಿಶೀಲನಾ ಅರ್ಜಿಯನ್ನು ಭರ್ತಿ ಮಾಡುವುದು ಕಡ್ಡಾಯವಾಗಿದೆ. ಬ್ಯಾಂಕ್ ಖಾತೆ ವಿವರಗಳು, ಆಧಾರ್ ಜೋಡಣೆ ಹಾಗೂ ಪಡಿತರ ಚೀಟಿ ಸಂಖ್ಯೆಗೆ ಸಂಬಂಧಿಸಿದಂತೆ




ಹೊಸ ಪ್ರಶ್ನೆಗಳನ್ನು ಈ ಅರ್ಜಿಯಲ್ಲಿ ಸೇರಿಸಲಾಗಿದೆ. ಗಣತಿದಾರರು ಮತ್ತು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯರು ನೇರವಾಗಿ ಮನೆಗಳಿಗೆ ಭೇಟಿ ನೀಡಿ ಈ ಮಾಹಿತಿ ಸಂಗ್ರಹಿಸಲಿದ್ದಾರೆ.

ಅನ್ಯ ರಾಜ್ಯದ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯನ್ನು ತಡೆಯಲು ಮತ್ತು ಅರ್ಹರಿಗೆ ಮಾತ್ರ ನೆರವು ತಲುಪಿಸಲು ಹೊಸ ಅರ್ಜಿಯಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೊಳಿಸಲಾಗಿದೆ. ಇದರನ್ವಯ, ಫಲಾನುಭವಿಗಳ ಬ್ಯಾಂಕ್ ಖಾತೆ ಕರ್ನಾಟಕದಲ್ಲೇ ಇರಬೇಕು (ಬೇರೆ ರಾಜ್ಯದ ಖಾತೆಗಳಿಗೆ ಅವಕಾಶವಿಲ್ಲ). ಹಾಗೆಯೇ, ಬ್ಯಾಂಕ್‌ನಲ್ಲಿ ಯಾವುದೇ ಸಾಲ ಪಡೆಯದ ವೈಯಕ್ತಿಕ ಖಾತೆ ನಂಬರ್ ಅನ್ನು ಮಾತ್ರ ನೀಡಬೇಕು ಮತ್ತು ಜಂಟಿ ಖಾತೆಗಳನ್ನು ನೀಡುವಂತಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ. ಈ ಹಿಂದೆ ನೀಡಲಾದ ಸಡಿಲಿಕೆಗಳನ್ನು ಸರಿಪಡಿಸಿ ಪಾರದರ್ಶಕತೆ ತರಲು ಕೆಲವು ದಾಖಲೆಗಳನ್ನು ಕಡ್ಡಾಯ ಗೊಳಿಸಲಾಗಿದೆ.

ಪಡಿತರ ಚೀಟಿ ಸಂಖ್ಯೆ ಒದಗಿಸುವುದು ಕಡ್ಡಾಯವಾಗಿದ್ದು, ಮೊಬೈಲ್ ಸಂಖ್ಯೆಗೆ ಆಧಾರ್ ಕಾರ್ಡ್ ಜೋಡಣೆ ಮಾಡಿಸದವರು ಕೂಡಲೇ ಜೋಡಣೆ ಮಾಡಿಸಿಕೊಳ್ಳಬೇಕು. ಇದರೊಂದಿಗೆ, ಫಲಾನುಭವಿಗಳು ಅಥವಾ ಅವರ ಮನೆಯವರು ಯಾವುದೇ ರೀತಿಯ ನಿವೃತ್ತಿ ಪಿಂಚಣಿ ಪಡೆಯುತ್ತಿದ್ದರೆ ಆ ಕುರಿತಾದ ಮಾಹಿತಿಯನ್ನು ಸಮೀಕ್ಷೆಯ ವೇಳೆ ಕಡ್ಡಾಯವಾಗಿ ಬಹಿರಂಗಪಡಿಸಿ ನಮೂದಿಸ ಬೇಕಾಗುತ್ತದೆ.

# ಮೈಸೂರು ದಸರಾ ಮಹೋತ್ಸವ: ಬಿಗಿ ಭದ್ರತೆ; 6000ಕ್ಕೂ ಹೆಚ್ಚು ಪೊಲೀಸರ ನಿಯೋಜನೆ; ಮರ, ಕಟ್ಟಡಗಳ ಮೇಲೇರಿ ಜಂಬೂ ಸವಾರಿ ವೀಕ್ಷಣೆಗೆ ನಿಷೇಧ

ಮೊದಲನೇ ಪುಟದಿಂದ

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಲ್ಲಿ ಅಕ್ರಮಗಳು ನಡೆದಿವೆ ಎಂದು ಆರೋಪಿಸಿ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ರಾಜೀನಾಮೆಗೆ ಒತ್ತಾಯಿಸಿ ಜಂತರ್ ಮಂತರ್‌ನಲ್ಲಿ ಸಿಜೆಪಿ ಕರೆ ನೀಡಿರುವ ಪ್ರತಿಭಟನೆಗೆ ಒಂದು ದಿನ ಮುಂಚಿತವಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ಪ್ರತಿಭಟನೆಯ ನಡುವೆ ಪ್ರಯಾಣಿಕರಿಗೆ ಆಗುವ ಅನಾನುಕೂಲತೆಯನ್ನು ತಪ್ಪಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ. ಗುರುವಾರ ಸುಮಾರು 5,000 ಪ್ರಯಾಣಿಕರು ತಮ್ಮ ರೈಲುಗಳನ್ನು ತಪ್ಪಿಸಿಕೊಂಡಿದ್ದಾರೆ ಎಂದು ರೈಲ್ವೆ ಅಧಿಕಾರಿ ಹೇಳಿದರು.

ಅಕ್ಟೋಬರ್ 10 ರಂದು ಬೆಳಿಗ್ಗೆ 04:00 ರಿಂದ ಮಧ್ಯಾಹ್ನ 2:00 ರವರೆಗೆ ಕೇಂದ್ರ ದೆಹಲಿಯಲ್ಲಿ ವಿರೋಧ ಪಕ್ಷಗಳ ಯೋಜಿತ ಪ್ರತಿಭಟನೆ/ಪ್ರತಿಭಟನೆಯಿಂದಾಗಿ ನವದೆಹಲಿ ಮತ್ತು ಹಜರತ್ ನಿಜಾಮುದ್ದೀನ್ ರೈಲು ನಿಲ್ದಾಣ ಪ್ರದೇಶದ ಸುತ್ತಲೂ ತೀವ್ರ ರಸ್ತೆ ದಟ್ಟಣೆ ಉಂಟಾಗಲಿದೆಎಂದು ಗುಪ್ತಚರ ಮಾಹಿತಿ ಮತ್ತು ಸಂಚಾರ ಸಲಹೆಗಳು ಸೂಚಿಸಿವೆ ಎಂದು ರೈಲ್ವೆ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಪ್ರಯಾಣಿಕರು ಇದೇ ರೀತಿಯ ತೊಂದರೆಗಳನ್ನು ಎದುರಿಸದಂತೆ ನೋಡಿಕೊಳ್ಳಲು, ರೈಲ್ವೆ ಪೂರ್ವಭಾವಿ, ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದೆ: ಅಕ್ಟೋಬರ್ 9 ರಂದು ಮಧ್ಯಾಹ್ನ 2:00 ರ ನಂತರ ಮೂಲದಿಂದ ಹೊರಡುವ ಎಲ್ಲಾ ಮೇಲ್ / ಎಕ್ಸ್‌ಪ್ರೆಸ್ ರೈಲುಗಳು ಅಕ್ಟೋಬರ್ 10 ರಂದು ಬೆಳಿಗ್ಗೆ 04:00 ರಿಂದ ಸಂಜೆ 6:00 ರವರೆಗೆ ನವದೆಹಲಿ / ಹಜರತ್ ನಿಜಾಮುದ್ದೀನ್ ತಲುಪಲು ನಿರ್ಧರಿಸಲಾಗಿತ್ತು, ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ.

**ಹೌರಾ, ಸೀಲ್ಡಾ ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಳನ್ನು ರದ್ದು:**

ಅಕ್ಟೋಬರ್ 10 ರ ಶನಿವಾರ ನವದೆಹಲಿ ರೈಲು ನಿಲ್ದಾಣ ಮತ್ತು ಹಜರತ್ ನಿಜಾಮುದ್ದೀನ್ ರೈಲು ನಿಲ್ದಾಣದ ಸುತ್ತಮುತ್ತ ತೀವ್ರ ಸಂಚಾರ ದಟ್ಟಣೆ ಉಂಟಾಗಬಹುದು ಎಂಬ ನಿರೀಕ್ಷೆಯ ಕಾರಣ, ಪೂರ್ವ ರೈಲ್ವೆ ಅಕ್ಟೋಬರ್ 9 ರ ಶುಕ್ರವಾರ ಪಶ್ಚಿಮ ಬಂಗಾಳದಿಂದ ಹೊರಡುವ ಎರಡು ರಾಜಧಾನಿ ಎಕ್ಸ್‌ಪ್ರೆಸ್ ರೈಲುಗಳನ್ನು ರದ್ದುಗೊಳಿಸಿದೆ.

ರದ್ದಾದ ರೈಲುಗಳು 12301 ಹೌರಾ–ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್ ಮತ್ತು 12313 ಸೀಲ್ಡಾ–ನವದೆಹಲಿ ರಾಜಧಾನಿ ಎಕ್ಸ್‌ಪ್ರೆಸ್. ಎರಡೂ ರೈಲುಗಳು ಅಕ್ಟೋಬರ್ 9 ರಂದು ತಮ್ಮ ಪ್ರಯಾಣವನ್ನು ಪ್ರಾರಂಭಿಸಬೇಕಿತ್ತು.

ರಾಜಸ್ಥಾನಕ್ಕೆ ಹೋಗುವ ಈ ಎಲ್ಲಾ ರೈಲುಗಳು ಅಕ್ಟೋಬರ್ 10 ರಂದು ರದ್ದು:

ರೈಲು ಸಂಖ್ಯೆ 15308, ಸಿರ್ಸಾ–ತಿಲಕ್ ಸೇತುವೆ: ಅಕ್ಟೋಬರ್ 10, 2026 ರಂದು ಸಿರ್ಸಾದಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ 12964, ಉದಯಪುರ ನಗರ–ಹಜರತ್ ನಿಜಾಮುದ್ದೀನ್: ಅಕ್ಟೋಬರ್ 9, 2026 ರಂದು ಉದಯಪುರ ನಗರದಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ. 12963, ಹಜರತ್ ನಿಜಾಮುದ್ದೀನ್–ಉದಯಪುರ ನಗರ: ಅಕ್ಟೋಬರ್ 10, 2026 ರಂದು ಹಜರತ್ ನಿಜಾಮುದ್ದೀನ್‌ನಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ 14727, ಶ್ರೀ ಗಂಗಾನಗರ–ತಿಲಕ್ ಸೇತುವೆ: ಅಕ್ಟೋಬರ್ 9, 2026 ರಂದು ಶ್ರೀ ಗಂಗಾನಗರದಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ 14738, ತಿಲಕ್ ಸೇತುವೆ–ಭಿವಾನಿ: ಅಕ್ಟೋಬರ್ 10, 2026 ರಂದು ತಿಲಕ್ ಸೇತುವೆಯಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ 14737, ಭಿವಾನಿ–ತಿಲಕ್ ಸೇತುವೆ: ಅಕ್ಟೋಬರ್ 10, 2026 ರಂದು ಭಿವಾನಿಯಿಂದ ಹೊರಡುವ ರೈಲು ರದ್ದಾಗಲಿದೆ.

ರೈಲು ಸಂಖ್ಯೆ 14728, ತಿಲಕ್ ಸೇತುವೆ–ಶ್ರೀ ಗಂಗಾನಗರ: ಅಕ್ಟೋಬರ್ 10, 2026 ರಂದು ತಿಲಕ್ ಸೇತುವೆಯಿಂದ ಹೊರಡುವ ರೈಲು ರದ್ದಾಗಲಿದೆ.

# ಚರಿತ್ರೆಯಲ್ಲೇ ಮಹಾ ವಿಕೋಪ: 2027ರ ಫೆಬ್ರವರಿವರೆಗೆ ಕಾಡಲಿದೆ 'ಸೂಪರ್ ಎಲ್ ನಿನೋ'! 4.5 ಲಕ್ಷಕ್ಕೂ ಹೆಚ್ಚು ಬಲಿ ಭೀತಿ

**ಮುಸ್ಸಂಜೆ ಸಮಯ,**

ನವದೆಹಲಿ: ಕಳೆದ ಕೆಲ ತಿಂಗಳಿಂದ ಭಾರತ ಸೇರಿ ಹಲವು ರಾಷ್ಟ್ರಗಳಲ್ಲಿ ಜನರ ಬೆವರಿಳಿಸುತ್ತಿರುವ ಎಲ್ ನಿನೋ, ಮುಂದಿನ ವರ್ಷದ ಫೆಬ್ರವರಿಯ ವರೆಗೆ ಮುಂದುವರಿಯಲಿದೆ. ಇಡೀ ವಿಶ್ವಕ್ಕೇ ಇದು ಆವರಿಸಿದ್ದು, ಭೂಮಿಯ ಬಹುತೇಕ ಭಾಗವನ್ನು ಸುಡಲಿದೆ ಎಂದು ಹವಾಮಾನ ತಜ್ಞರು ಹೇಳಿದ್ದಾರೆ.

ಸಡನ್ನಾಗಿ ಬದಲಾಗುತ್ತಿರುವ ಹವಾಮಾನ ಮತ್ತು ಹೆಚ್ಚುತ್ತಿರುವ ತಾಪಮಾನದಿಂದ ತತ್ತರಿಸುತ್ತಿರುವ ಇಡೀ ಜಗತ್ತಿಗೆ ಅಂತಾರಾಷ್ಟ್ರೀಯ ಹವಾಮಾನ ಸಂಸ್ಥೆಗಳು ಮತ್ತೊಂದು ಆಘಾತಕಾರಿ ಮುನ್ನೆಚ್ಚರಿಕೆ ನೀಡಿವೆ. ಪ್ರಸ್ತುತ ಜಾಗತಿಕ ಹವಾಮಾನವನ್ನು ನಿಯಂತ್ರಿಸುತ್ತಿರುವ ಭೀಕರ 'ಸೂಪರ್ ಎಲ್ ನಿನೋ' ವಿದ್ಯಮಾನವು ಮತ್ತಷ್ಟು ತೀವ್ರಗೊಂಡು, ಮುಂಬರುವ 2027ರ ಫೆಬ್ರವರಿ ತಿಂಗಳವರೆಗೂ ನಿರಂತರವಾಗಿ ಮುಂದುವರೆಯಲಿದೆ ಎಂದು ವಿಶ್ವ ಹವಾಮಾನ ಸಂಸ್ಥೆ ಅಧಿಕೃತವಾಗಿ ತಿಳಿಸಿದೆ.

1950ರಲ್ಲಿ ಜಾಗತಿಕ ಹವಾಮಾನ ದಾಖಲೆಗಳು ಆರಂಭವಾದ ನಂತರ ಕಂಡುಬಂದ ಅತ್ಯಂತ ಪ್ರಬಲ ಹಾಗೂ ವಿನಾಶಕಾರಿ ಎಲ್ ನಿನೋಗಳಲ್ಲಿ ಇದು ಒಂದಾಗಿದ್ದು, ಡಿಸೆಂಬರ್ ವೇಳೆಗೆ ತನ್ನ ಗರಿಷ್ಠ ಮಟ್ಟವನ್ನು ತಲುಪಲಿದೆ.

ಪೆಸಿಫಿಕ್ ಮಹಾಸಾಗರದಲ್ಲಿ ಅಭೂತಪೂರ್ವ ಉಷ್ಣಾಂಶ: ದಾಖಲೆ ಉಗುಳಿದ ಸಮುದ್ರ!

ಎಲ್ ನಿನೋದ ಕೇಂದ್ರಬಿಂದುವಾಗಿರುವ ಮಧ್ಯ ಮತ್ತು ಪೂರ್ವ ಉಷ್ಣವಲಯದ ಪೆಸಿಫಿಕ್ ಮಹಾಸಾಗರದಲ್ಲಿ ತಾಪಮಾನವು ಇದುವರೆಗೆ ಕಾಣದ ಮಟ್ಟಕ್ಕೆ ಏರಿಕೆಯಾಗಿದೆ.

3.7°C ನಿಂದ 4.0°C ಹೆಚ್ಚಳ: ಅಕ್ಟೋಬರ್ ಮತ್ತು ಡಿಸೆಂಬರ್ ನಡುವೆ ಪೆಸಿಫಿಕ್ ಸಮುದ್ರದ ಮೇಲ್ಮೈ ತಾಪಮಾನವು ವಾಡಿಕೆಗಿಂತ 3.7 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ ಎಂದು WMO ಅಂದಾಜಿಸಿದೆ. ಇದು 2015–16ರಲ್ಲಿದ್ದ 2.6ಲಿಅ ಯ ಸಾರ್ವಕಾಲಿಕ ದಾಖಲೆಯನ್ನು ಮುರಿದಿದೆ.

ಜಪಾನ್ ಹವಾಮಾನ ಸಂಸ್ಥೆಯ ಎಚ್ಚರಿಕೆ: ಜಪಾನ್‌ನ ಹವಾಮಾನ ಸಂಸ್ಥೆಯ ವರದಿಯಂತೆ, ಸೆಪ್ಟೆಂಬರ್ ತಿಂಗಳಲ್ಲೇ ಪೆಸಿಫಿಕ್ ಸಮುದ್ರದ ತಾಪಮಾನವು ಸರಾಸರಿಗಿಂತ 4.0 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಿದೆ. ಇದು 1949 ರಿಂದೀಚೆಗೆ ದಾಖಲಾದ ಅತ್ಯಂತ ಗರಿಷ್ಠ ಮಟ್ಟವಾಗಿದೆ.



ನಾವು ಅಳೆಯುತ್ತಿರುವ ಸಮುದ್ರವು ಇತಿಹಾಸದಲ್ಲೇ ಅತ್ಯಂತ ಬೆಚ್ಚಗಿನ ಸ್ಥಿತಿಯಲ್ಲಿದೆ. ಅದು ತನ್ನಲ್ಲಿ ಹೀರಿಕೊಂಡಿರುವ ಅಗಾಧ ಶಾಖವನ್ನು ವಾತಾವರಣಕ್ಕೆ ಬಿಡುಗಡೆ ಮಾಡಲು ಸಿದ್ಧವಾಗಿದೆ ಎಂದು ಘಒಔ ಪ್ರಧಾನ ಕಾರ್ಯದರ್ಶಿ ಸೆಲೆಸ್ಟ್ ಸೌಲೊ ಆತಂಕ ವ್ಯಕ್ತಪಡಿಸಿದ್ದಾರೆ.

**4.5 ಲಕ್ಷಕ್ಕೂ ಹೆಚ್ಚು ಮಾನವ ಜೀವಗಳಿಗೆ ಕಂಟಕ!**

ವೇಗವಾಗಿ ಬಿಸಿಯಾಗುತ್ತಿರುವ ಸಾಗರ ಮತ್ತು ವಾತಾವರಣದ ಪರಿಣಾಮವಾಗಿ ಜಾಗತಿಕವಾಗಿ ಭಾರಿ ಮಟ್ಟದ ಜೀವಹಾನಿಯಾಗುವ ಭೀತಿಯಿದೆ. ಚಿಕಾಗೊ ವಿಶ್ವವಿದ್ಯಾಲಯದ 'ಕ್ಲೈಮೇಟ್ ಇಂಪ್ಯಾಕ್ಟ್ ಲ್ಯಾಬ್' ನಡೆಸಿದ ಅಧ್ಯಯನದ ಪ್ರಕಾರ:

ಜೂನ್ 2026 ರಿಂದ ಫೆಬ್ರವರಿ 2027 ರ ನಡುವೆ ಈ ಸೂಪರ್–ಎಲ್ ನಿನೋದಿಂದ ಸೃಷ್ಟಿಯಾಗುವ ತೀವ್ರ ಶಾಖದ ಅಲೆಗಳು (Heatwaves), ಬರಗಾಲ, ಸಾಂಕ್ರಾಮಿಕ ರೋಗಗಳು ಹಾಗೂ ಪ್ರವಾಹಗಳಿಂದಾಗಿ ವಿಶ್ವಾದ್ಯಂತ ಸುಮಾರು 4,51,000 (4.51 ಲಕ್ಷ) ಹೆಚ್ಚುವರಿ ಜನರು ಪ್ರಾಣ ಕಳೆದುಕೊಳ್ಳುವ ಆತಂಕವಿದೆ.

**ಚಳಿಗಾಲದಲ್ಲೂ ಕೆಂಡದಂತೆ ಕಾಯಲಿದೆ ಭೂಗೋಳ** : ಸಾಮಾನ್ಯವಾಗಿ ಅತಿಯಾದ ಚಳಿ ಇರಬೇಕಾದ ಉತ್ತರ ಗೋಳಾರ್ಧದ ದೇಶಗಳಲ್ಲೂ ಈ ಬಾರಿ ತಾಪಮಾನ ಸುಡಲಿದೆ ಎಂದು ಹವಾಮಾನ ತಜ್ಞ ರಯಾನ್ ಮೌ ಎಚ್ಚರಿಸಿದ್ದಾರೆ. ಅಮೆರಿಕದ ಕೆಲವು ಭಾಗಗಳನ್ನು ಹೊರತುಪಡಿಸಿ, ಇಡೀ ಭೂಮಂಡಲವು ಬಿಸಿಲಿನಿಂದಾಗಿ ಕೆಂಪು ಬಣ್ಣಕ್ಕೆ ತಿರುಗಿರುವ ತಾಪಮಾನ ನಕ್ಷೆಯನ್ನು ಅವರು ಹಂಚಿಕೊಂಡಿದ್ದಾರೆ.

ಯುರೋಪಿಯನ್ ಒಕ್ಕೂಟದ 'ಕೋಪರ್ನಿಕಸ್ ಹವಾಮಾನ ಬದಲಾವಣೆ ಸೇವೆ' (C3S) ಪ್ರಕಾರ, ಜಾಗತಿಕ ಸರಾಸರಿ ತಾಪಮಾನವು ಈಗಾಗಲೇ 16.96ಲಿಅ ತಲುಪಿದ್ದು, ಈ ಹಿಂದಿನ ಎಲ್ಲಾ ದಾಖಲೆಗಳನ್ನು ನುಚ್ಚುನೂರು ಮಾಡಿದೆ.

**ಭಾರತ ಸೇರಿದಂತೆ ಜಗತ್ತಿನ ಮೇಲಾಗುವ ದುಷ್ಪರಿಣಾಮಗಳು**

ದೀರ್ಘಕಾಲದ ಮಳೆ ಅಭಾವದಿಂದಾಗಿ ಪ್ರಮುಖ ಕೃಷಿ ದೇಶಗಳಲ್ಲಿ ಬೆಳೆ ನಾಶವಾಗಿ ಜಾಗತಿಕ ಮಟ್ಟದಲ್ಲಿ ಆಹಾರ ಧಾನ್ಯಗಳ ಅಭಾವ ಎದುರಾಗಲಿದೆ. ಕೆಲವು ಪ್ರದೇಶಗಳು ಸಂಪೂರ್ಣ ಒಣಗಿದ ಬರಗಾಲಕ್ಕೆ ಈಡಾದರೆ, ಕರಾವಳಿ ಭಾಗಗಳು ಅಕಾಲಿಕ ಹಾಗೂ ಭೀಕರ ಚಂಡಮಾರುತಗಳಿಗೆ ತುತ್ತಾಗಲಿವೆ. ಮುಂಬರುವ 2027ರ ಆರಂಭದವರೆಗೂ ಜಾಗತಿಕವಾಗಿ ಉಷ್ಣ ಗಾಳಿಯ ಪ್ರಭಾವ ಮುಂದುವರೆಯಲಿದ್ದು, ಮಾನವ ಆರೋಗ್ಯ, ವಿದ್ಯುತ್ ಬೇಡಿಕೆ ಮತ್ತು ಜಲಸಂಪನ್ಮೂಲ ನಿರ್ವಹಣೆ ಜಗತ್ತಿನ ಸರ್ಕಾರಗಳಿಗೆ ದೊಡ್ಡ ಸವಾಲಾಗಲಿದೆ.

# ರೈಲು ಪ್ರಯಾಣದಲ್ಲಿ ಮಕ್ಕಳಿಗೆ ಶೇ.50 ರಷ್ಟು ರಿಯಾಯಿತಿ! ಯಾವ ವಯಸ್ಸಿನವರೆಗೆ ಗೊತ್ತಾ?

**ಮುಸ್ಸಂಜೆ ಸಮಯ,**

ಭಾರತೀಯ ರೈಲ್ವೆಯಲ್ಲಿ ಮಕ್ಕಳೊಂದಿಗೆ ಪ್ರಯಾಣಿಸುವ ಪೋಷಕರಿಗೆ ಟಿಕೆಟ್ ದರದ ಕುರಿತು ಕೆಲವು ನಿಯಮಗಳಿವೆ. 5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರಯಾಣದ ಅವಕಾಶವಿದ್ದು, 5ರಿಂದ 12 ವರ್ಷದೊಳಗಿನ ಮಕ್ಕಳಿಗೆ ಪ್ರತ್ಯೇಕ ಸೀಟ್ ಅಥವಾ ಬರ್ತ್ ಬೇಕೇ ಬೇಡವೇ ಎಂಬುದರ ಆಧಾರದ ಮೇಲೆ ಟಿಕೆಟ್ ದರ ಅನ್ವಯವಾಗುತ್ತದೆ.

**ಈ ನಿಯಮಗಳ ಸಂಪೂರ್ಣ ಮಾಹಿತಿ ಇಲ್ಲಿದೆ.**

ಕಡಿಮೆ ವೆಚ್ಚದಲ್ಲಿ ದೂರದ ಪ್ರಯಾಣ ಮಾಡಲು ರೈಲು ಪ್ರಯಾಣ ಉತ್ತಮ ಆಯ್ಕೆಯಾಗಿದೆ. ವಿಶ್ವದ ಅತಿದೊಡ್ಡ ರೈಲ್ವೆ ಜಾಲಗಳಲ್ಲಿ ಒಂದಾಗಿರುವ ಭಾರತೀಯ ರೈಲ್ವೆಯಲ್ಲಿ ಪ್ರತಿದಿನ ಸಾವಿರಾರು ರೈಲುಗಳು ಸಂಚರಿಸುತ್ತವೆ.

ಲಕ್ಷಾಂತರ ಜನರು ಪ್ರಯಾಣಿಸುತ್ತಾರೆ. ಕುಟುಂಬದೊಂದಿಗೆ, ವಿಶೇಷವಾಗಿ ಮಕ್ಕಳೊಂದಿಗೆ ಪ್ರಯಾಣಿಸುವಾಗ ಟಿಕೆಟ್ ನಿಯಮಗಳು ಮತ್ತು ದರಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ.

**5 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರಯಾಣ**

ಭಾರತೀಯ ರೈಲ್ವೆಯಲ್ಲಿ 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಿಗೆ ಪ್ರತ್ಯೇಕ ಸೀಟ್ ಅಥವಾ ಬರ್ತ್ ಅಗತ್ಯವಿಲ್ಲದಿದ್ದರೆ ಉಚಿತವಾಗಿ ಪ್ರಯಾಣಿಸಲು ಅವಕಾಶವಿದೆ.

ಪ್ರತ್ಯೇಕ ಬರ್ತ್ ಬೇಡವಾದರೆ: ಮಗುವಿಗೆ ಪ್ರತ್ಯೇಕ ಸೀಟ್ ಅಥವಾ ಬರ್ತ್ ಕಾಯ್ದಿರಿಸದೆ ಪೋಷಕರೊಂದಿಗೆ ಪ್ರಯಾಣಿಸಬಹುದು. ಐಖಅಖಿಅ ವೆಬ್‌ಸೈಟ್‌ನಲ್ಲಿ ಟಿಕೆಟ್ ಕಾಯ್ದಿರಿಸುವಾಗ 'Add Infant without Berth' ಆಯ್ಕೆಯನ್ನು ಆರಿಸಿ ಮಗುವಿನ ವಿವರಗಳನ್ನು ನಮೂದಿಸಬಹುದು.

ಪ್ರತ್ಯೇಕ ಬರ್ತ್ ಬೇಕಾದರೆ: ಮಗುವಿಗೆ ಪ್ರತ್ಯೇಕ ಬರ್ತ್ ಬೇಕಿದ್ದರೆ ಪೂರ್ಣ ಟಿಕೆಟ್ ದರ ಪಾವತಿಸಿ ಕಾಯ್ದಿರಿಸಬೇಕು.

**5ರಿಂದ 12 ವರ್ಷದ ಮಕ್ಕಳಿಗೆ ಟಿಕೆಟ್ ದರ ಎಷ್ಟು?** 5ರಿಂದ 12 ವರ್ಷದೊಳಗಿನ




ಮಕ್ಕಳಿಗೆ ಪ್ರಯಾಣದ ಸಂದರ್ಭದಲ್ಲಿ ಎರಡು ಆಯ್ಕೆಗಳಿವೆ.

1. ಪ್ರತ್ಯೇಕ ಬರ್ತ್ ಬೇಡವಾದರೆ ಅರ್ಧ ದರ: ಮಗುವಿಗೆ ಪ್ರತ್ಯೇಕ ಸೀಟ್ ಅಥವಾ ಬರ್ತ್ ಬೇಡವಾದರೆ, ಅನ್ವಯಿಸುವ ನಿಯಮಗಳ ಪ್ರಕಾರ ವಯಸ್ಕರ ಮೂಲ ಪ್ರಯಾಣ ದರದ ಅರ್ಧದಷ್ಟು ಶುಲ್ಕ ವಿಧಿಸಲಾಗುತ್ತದೆ. ಈ ಸಂದರ್ಭದಲ್ಲಿ ಮಗುವಿಗೆ ಪ್ರತ್ಯೇಕ ಬರ್ತ್ ಕಾಯ್ದಿರಿಸಲಾಗುವುದಿಲ್ಲ.

2. ಪ್ರತ್ಯೇಕ ಬರ್ತ್ ಬೇಕಾದರೆ ಪೂರ್ಣ ದರ: ದೂರದ ಪ್ರಯಾಣದ ವೇಳೆ ಮಗುವಿಗೆ ಪ್ರತ್ಯೇಕ ಬರ್ತ್ ಬೇಕಿದ್ದರೆ ಪೂರ್ಣ ಟಿಕೆಟ್ ದರ ಪಾವತಿಸಿ ಕಾಯ್ದಿರಿಸಬೇಕು.

**12 ವರ್ಷ ಮೇಲ್ಪಟ್ಟ ಮಕ್ಕಳಿಗೆ ಪೂರ್ಣ ಟಿಕೆಟ್**

ರೈಲ್ವೆ ನಿಯಮಗಳ ಪ್ರಕಾರ, ಪ್ರಯಾಣದ ದಿನದಂದು 12 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ವಯಸ್ಸಿನ ಪ್ರಯಾಣಿಕರಿಗೆ ಸಾಮಾನ್ಯವಾಗಿ ವಯಸ್ಕರ ಪೂರ್ಣ ಟಿಕೆಟ್ ದರ ಅನ್ವಯಿಸುತ್ತದೆ. ಈ ನಿಯಮವು ಕಾಯ್ದಿರಿಸಿದ ಮತ್ತು ಕಾಯ್ದಿರಿಸದ ಬೋಗಿಗಳ ಪ್ರಯಾಣಕ್ಕೂ ಅನ್ವಯಿಸುತ್ತದೆ.

**ರೈಲಿನಲ್ಲಿ ಮಕ್ಕಳೊಂದಿಗೆ ಪ್ರಯಾಣಿಸುವಾಗ ಈ ಅಂಶಗಳನ್ನು ಗಮನಿಸಿ**

* ವಯಸ್ಸಿನ ದಾಖಲೆ: ಅಗತ್ಯವಿದ್ದಲ್ಲಿ ಪರಿಶೀಲನೆ ವೇಳೆ ತೋರಿಸಲು ಮಗುವಿನ ಆಧಾರ್ ಕಾರ್ಡ್, ಜನನ ಪ್ರಮಾಣಪತ್ರ ಅಥವಾ ಶಾಲೆಯ ಗುರುತಿನ ಚೀಟಿಯನ್ನು ಕೊಂಡೊಯ್ಯುವುದು ಉತ್ತಮ.

* ಪ್ರಯಾಣದ ದಿನದ ವಯಸ್ಸು: ಟಿಕೆಟ್ ಕಾಯ್ದಿರಿಸಿದ ದಿನದ ವಯಸ್ಸಿಗಿಂತ ಪ್ರಯಾಣದ ದಿನದಂದು ಮಗುವಿನ ವಯಸ್ಸು ಎಷ್ಟಿದೆ ಎಂಬುದು ಮುಖ್ಯ.

* ಬರ್ತ್ ಕಾಯ್ದಿರಿಸುವಿಕೆ: ಮಗುವಿಗೆ ಪ್ರತ್ಯೇಕ ಬರ್ತ್ ಬೇಕಿದ್ದರೆ ಟಿಕೆಟ್ ಕಾಯ್ದಿರಿಸುವಾಗಲೇ ಸೂಕ್ತ ಆಯ್ಕೆಯನ್ನು ಮಾಡಿಕೊಳ್ಳಿ.

ಗಮನಿಸಿ: ಟಿಕೆಟ್ ಕಾಯ್ದಿರಿಸುವ ಮೊದಲು ಭಾರತೀಯ ರೈಲ್ವೆ ಅಥವಾ ಐಖಅಖಿಅಯ ಅಧಿಕೃತ ನಿಯಮಗಳನ್ನು ಪರಿಶೀಲಿಸಿ. ಅರ್ಧ ದರದ ಸೌಲಭ್ಯವು ಪ್ರತ್ಯೇಕ ಬರ್ತ್ ಇಲ್ಲದ ಪ್ರಯಾಣಕ್ಕೆ ಸಂಬಂಧಿಸಿದ್ದು, ಎಲ್ಲಾ ಸಂದರ್ಭಗಳಲ್ಲಿಯೂ ಮಕ್ಕಳಿಗೆ ಅರ್ಧ ಟಿಕೆಟ್ ಅನ್ವಯಿಸುತ್ತದೆ ಎಂದರ್ಥವಲ್ಲ.

# ಬೆಂಗಳೂರು ಟ್ರಾಫಿಕಲ್ಲಿ ಕಳೆವ ಸಮಯ 1 ತಿಂಗಳ ದುಡಿಮೆಗೆ ಸಮ; ಸಾವಿನ ಅಪಾಯ ಶೇ.7.5ರಷ್ಟು ಹೆಚ್ಚಳ

**ಮುಸ್ಸಂಜೆ ಸಮಯ,**

ಬೆಂಗಳೂರು: ನಗರದ ಟ್ರಾಫಿಕ್ ದಟ್ಟಣೆಯಲ್ಲಿ ವ್ಯರ್ಥವಾಗುವ ದುಡಿಯುವ ವ್ಯಕ್ತಿಯ ಸಮಯವು 1 ತಿಂಗಳ ಕೆಲಸದ ದಿನಗಳು, ದುಡಿಮೆಗೆ ಸಮನಾಗಿದೆ ಎಂದು ನಗರದ ಪ್ರಾಸ್ಟರ್ ಐಒ ಹೆಸರಿನ ತೆರಿಗೆ ಮೌಲ್ಯಮಾಪನ ಸಂಸ್ಥೆಯೊಂದು ನಡೆಸಿದ ಸರ್ವೆಯಲ್ಲಿ ಬೆಳಕಿಗೆ ಬಂದಿದೆ.

ಈ ಕುರಿತಾದ ವರದಿಯನ್ನು ಜಾಲತಾಣ ಎಕ್ಸ್‌ನಲ್ಲಿ ಹಂಚಿಕೊಂಡಿರುವ ಸಂಸ್ಥೆ, ಟ್ರಾಫಿಕ್‌ನಲ್ಲಿ ವ್ಯರ್ಥವಾಗುವ ಸಮಯವು ಪ್ರತಿ ವರ್ಷದ ವೇತನದಲ್ಲಿ ಶೇ.8ರಷ್ಟು ವೇತನ ಕಡಿತಕ್ಕೆ ಸಮ.

ಇನ್ನು ಈ ಅಮೂಲ್ಯ ಸಮಯವನ್ನು ಉಳಿಸಬೇಕು ಎಂದರೆ ಉದ್ಯೋಗಿಗಳು ಟೆಕ್ ಪಾರ್ಕ್ ಸಮೀಪದಲ್ಲೇ ವಾಸಿಸಬೇಕು. ಟೆಕ್ ಪಾರ್ಕ್ ಸಮೀಪದಲ್ಲೇ ಮನೆ ಮಾಡಬೇಕು ಎಂದರೆ ವಾರ್ಷಿಕ 1.6 ಲಕ್ಷ ರು. ನಿಂದ 2.4 ಲಕ್ಷ ರು. ಹೆಚ್ಚುವರಿಯಾಗಿ ಬಾಡಿಗೆಗಾಗಿ ವ್ಯಯಿಸಬೇಕಾಗುತ್ತದೆ ಎಂದು ಹೇಳಿದೆ.

**ಸಾವಿನ ಅಪಾಯ ಶೇ.7.5ರಷ್ಟು ಹೆಚ್ಚಳ**

ಬೆಂಗಳೂರು ನಗರದ ಟ್ರಾಫಿಕ್ ಸಮಸ್ಯೆಯು ಬಹುದೊಡ್ಡ ನಾಗರಿಕ ಸಮಸ್ಯೆಯಾಗಿರುವ ಜೊತೆಗೆ ಆರೋಗ್ಯ ಸಮಸ್ಯೆಯು ಆಗಿದೆ. ಸಮಯಕ್ಕೆ ಸರಿಯಾಗಿ ರೋಗಿಗಳು ಆಸ್ಪತ್ರೆಗೆ ತಲುಪಲಾಗದೆ ಜೀವಹಾನಿಯ ಜೊತೆಗೆ ಲಕ್ಷಾಂತರ ರು. ನಷ್ಟವಾಗುತ್ತಿದೆ. ಹೃದಯಾಘಾತವಾದವರು ಟ್ರಾಫಿಕ್‌ನಲ್ಲಿ ಸಿಕ್ಕಿಕೊಂಡಾಗ ಪ್ರತಿ 30 ನಿಮಿಷ ವಿಳಂಬವು ಸಾವಿನ ಅಪಾಯವನ್ನು ಶೇ.7.5ರಷ್ಟು ಹೆಚ್ಚಿಸುತ್ತದೆ.



ಇನ್ನು ಮೂಲಸೌಕರ್ಯಗಳ ಅದ್ವಾನದಿಂದ ಸಂಭವಿಸುವ ಅಪಘಾತಗಳ ಸಂಖ್ಯೆಯು ಹೆಚ್ಚಿದೆ. ಹೊರ ವರ್ತುಲ ರಸ್ತೆಯಲ್ಲಿ ಸಾಮರ್ಥ್ಯದ ದುಪ್ಪಟ್ಟು ವಾಹನಗಳು ಸಂಚರಿಸುತ್ತಿವೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಸರ್ವೆ ಕುರಿತು ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಉದ್ಯಮಿ ಕಿರಣ್ ಮಜುಮ್ದಾರ್ ಶಾ, ಬೆಂಗಳೂರಿನ ಸಮಸ್ಯೆಗಳನ್ನು ವಿಶ್ವಾಸಾರ್ಹ ಮತ್ತು ವೈಜ್ಞಾನಿಕ ದತ್ತಾಂಶದ ಆಧಾರದ ಮೇಲೆ ಸಂಘಟಿತವಾಗಿ ಪರಿಹರಿಸಬೇಕಾಗುತ್ತದೆ. ನಗರದ ವೇಗದ ಬೆಳವಣಿಗೆಗೆ ಅವಕಾಶ ನೀಡುವ ಧಾವಂತದಲ್ಲಿ, ದೀರ್ಘಕಾಲೀನ ಮತ್ತು ಸುಸ್ಥಿರ ಬೆಳವಣಿಗೆಗೆ ಅಗತ್ಯವಾದ ಕೆಲವು ಮೂಲಭೂತ ಹಾಗೂ ಮುಖ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವುದರಲ್ಲಿ ನಾವು ಎಡವಿದ್ದೇವೆ ಎಂದಿದ್ದಾರೆ.

**ಸಂಸ್ಥೆ ತಿಳಿಸಿರುವ ಪರಿಹಾರ ಕ್ರಮಗಳು**

ಮೆಟ್ರೋ ಕಾಮಗಾರಿಯಿಂದ ಸ್ಥಗಿತವಾಗಿರುವ ರಿಂಗ್ ರಸ್ತೆಯಲ್ಲಿನ ಪ್ರತ್ಯೇಕ ಬಸ್ ಪಥವನ್ನು ಪುನಾರಂಭಿಸ ಬೇಕು.

ಆಯಂಬುಲೆನ್ಸ್ ಸಂಚಾರಕ್ಕೆ ಆದ್ಯತೆ ನೀಡುವ ವ್ಯವಸ್ಥೆ ಆಗಬೇಕು.

ನಗರದಾದ್ಯಂತ ಮೆಟ್ರೋ, ಸಬರ್ಬನ್ ರೈಲು ಯೋಜನೆ ಬೇಗ ಮುಗಿಸಿ ಸಂಚಾರ ಆರಂಭಿಸಬೇಕು.

ರಿಂಗ್ ರಸ್ತೆ ಮೆಟ್ರೋ ಸಂಚಾರ ತ್ವರಿತವಾಗಿ ಆರಂಭಿಸಬೇಕು.

ನಗರದ ಸಾವಿರಾರು ರಸ್ತೆ ಗುಂಡಿಗಳನ್ನು ಮುಚ್ಚಿ ಉತ್ತಮ ರಸ್ತೆ ಮೂಲಸೌಕರ್ಯ ಒದಗಿಸಬೇಕು.

# ಆರೋಗ್ಯ ಕರ್ನಾಟಕ

## ಇವತ್ತಿನ ಜೀವನ ಶೈಲಿಗೆ ಹೊಂದುವಂತಹ ಆಹಾರ ಪದ್ಧತಿ ಮತ್ತು ಆರೋಗ್ಯ ಇವತ್ತಿನ ಜೀವನ ಶೈಲಿಯಲ್ಲಿ ಆರೋಗ್ಯವೇ ಭಾಗ್ಯ

**ಮುಸ್ಸಂಜೆ ಸಮಯ,**

ಇಂದು ನಮ್ಮ ಜೀವನ ಪೂರ್ತಿ ಬದಲಾಗಿದೆ. ಬೆಳಗ್ಗೆಯಿಂದ ಸಂಜೆಯವರೆಗೆ ಕಂಪ್ಯೂಟರ್ ಮುಂದೆ ಕುಳಿತುಕೊಳ್ಳುವುದು, ಮೊಬೈಲ್ ನೋಡುವುದು, ರಾತ್ರಿ ತಡವಾಗಿ ಮಲಗುವುದು, ಹೊರಗಿನ ಜಂಕ್ ಫುಡ್ ತಿನ್ನುವುದು ಸಾಮಾನ್ಯವಾಗಿದೆ. ಈ ಕಾರಣದಿಂದಲೇ 30ನೇ ವಯಸ್ಸಿನಲ್ಲೇ ಶುಗರ್, ಬಿಪಿ, ಬೊಜ್ಜು, ಮಂಡಿ ನೋವು ಬರುತ್ತಿದೆ.

**ನಾವು ತಿನ್ನುವ ಆಹಾರವೇ ನಮ್ಮ ಔಷಧಿ ಆಗಬೇಕು. ಅದು ಹೇಗೆ ಎಂದರೆ:**

**1. ಇವತ್ತಿನ ಆಹಾರ ಪದ್ಧತಿ ಹೇಗಿರಬೇಕು?**

ಬೆಳಗ್ಗೆ ಎದ್ದ ತಕ್ಷಣ (6–7 ಗಂಟೆಗೆ):

ಖಾಲಿ ಹೊಟ್ಟೆಗೆ 1–2 ಲೋಟ ಉಗುರು ಬೆಚ್ಚಗಿನ ನೀರು. ಅದಕ್ಕೆ ನಿಂಬೆ ಅಥವಾ ನೆನೆಸಿದ ಮೆಂತ್ಯದ ನೀರು ಹಾಕಬಹುದು. ಇದು ಹೊಟ್ಟೆಯನ್ನು ಸ್ವಚ್ಛ ಮಾಡುತ್ತದೆ.

ಬೆಳಗಿನ ಉಪಾಹಾರ (8–9 ಗಂಟೆಗೆ) – ದಿನದ ಅತ್ಯಂತ ಮುಖ್ಯ ಊಟ:

ಇದನ್ನು ತಪ್ಪಿಸಲೇಬಾರದು.

– ರಾಗಿ ಮುದ್ದೆ, ರಾಗಿ ದೋಸೆ, ಇಡ್ಲಿ–ಸಾಂಬಾರ್, ಅವಲಕ್ಕಿ, ಸಿರಿಧಾನ್ಯಗಳ ಉಪ್ಮಾ

– ಮೊಳಕೆ ಕಾಳುಗಳು, ಒಂದು ಹಣ್ಣು, ಒಂದು ಲೋಟ ಮಜ್ಜಿಗೆ

– ಟೀ, ಕಾಫಿ ಜೊತೆಗೆ ಬಿಸ್ಕತ್, ಬ್ರೆಡ್, ಮೈದಾ ಪದಾರ್ಥಗಳನ್ನು ಆದಷ್ಟು ಕಡಿಮೆ ಮಾಡಿ.

ಮಧ್ಯಾಹ್ನದ ಊಟ (1–2 ಗಂಟೆಗೆ):

– ಹೊಟ್ಟೆ ತುಂಬಾ ತಿನ್ನಬೇಡಿ, 80% ಸಾಕು.

– ಅನ್ನದ ಜೊತೆಗೆ ಎರಡು ರೀತಿಯ ತರಕಾರಿ ಪಲ್ಯ, ಸೊಪ್ಪು, ಬೇಳೆ–ಸಾಂಬಾರ್, ಮೊಸರು–ಮಜ್ಜಿಗೆ ಇರಲಿ.

– ವಾರದಲ್ಲಿ 2–3 ಬಾರಿ ಜೋಳ, ಸಜ್ಜೆ, ಸಾಮೆ, ಊದಲುಗಳಂತಹ ಸಿರಿಧಾನ್ಯಗಳನ್ನು ಬಳಸಿ.

ಸಂಜೆ (4–5 ಗಂಟೆಗೆ):

ಕುರುಕುರೆ, ಚಿಪ್ಸ್ ಬದಲು – ಹುರಿದ ಕಡಲೆಕಾಯಿ, ಮಖಾನಾ, ಹಣ್ಣು, ಎಳನೀರು, ಗ್ರೀನ್ ಟೀ.

ರಾತ್ರಿ ಊಟ (7:30 – 8:30 ಒಳಗೆ):

ರಾತ್ರಿ ಊಟ ಆದಷ್ಟು ಹಗುರವಾಗಿರಲಿ ಮತ್ತು ಬೇಗನೆ ಆಗಲಿ.

– 2 ಚಪಾತಿ + ತರಕಾರಿ + ಸೂಪ್

– ರಾತ್ರಿ ಮೊಸರು, ಅನ್ನ, ಎಣ್ಣೆಯಲ್ಲಿ ಕರಿದ ಪದಾರ್ಥಗಳನ್ನು ಕಡಿಮೆ ಮಾಡಿ.




– ಊಟದ ನಂತರ 10 ನಿಮಿಷ ನಿಧಾನವಾಗಿ ನಡೆಯಿರಿ.

**2. ಇವತ್ತು ತಪ್ಪಿಸಲೇಬೇಕಾದ ಆಹಾರಗಳು**

1. ಸಕ್ಕರೆ ಮತ್ತು ಮೈದಾ: ಕೋಕ್, ಪೆಪ್ಸಿ, ಕೇಕ್, ಬನ್, ಪಿಜ್ಜಾ, ಬರ್ಗರ್ – ಇವು ನೇರವಾಗಿ ಬೊಜ್ಜು ಮತ್ತು ಶುಗರ್‌ಗೆ ದಾರಿ.

2. ಅತಿಯಾದ ಎಣ್ಣೆ ಮತ್ತು ಉಪ್ಪು: ಪ್ಯಾಕೆಟ್ ಚಿಪ್ಸ್, ಉಪ್ಪಿನಕಾಯಿ, ಫ್ರೈ ಮಾಡಿದ ಪದಾರ್ಥಗಳು.

3. ರಾತ್ರಿ 10 ಗಂಟೆ ನಂತರ ತಿನ್ನುವುದು.

4. ಊಟ ಮಾಡುತ್ತಾ ಮೊಬೈಲ್ ನೋಡುವುದು – ಇದರಿಂದ ಎಷ್ಟು ತಿಂದಿದ್ದೇವೆ ಎಂಬ ಅರಿವೇ ಇರುವುದಿಲ್ಲ.

**3. ಆರೋಗ್ಯ ಕಾಪಾಡಲು 5 ಚಿನ್ನದ ನಿಯಮಗಳು**

ನಿಯಮ 1: ನೀರು – ದಿನಕ್ಕೆ 2.5 ರಿಂದ 3 ಲೀಟರ್ ನೀರು ಕುಡಿಯಿರಿ. ನೀರು ಕುಡಿಯುವುದು ಎಂದರೆ ಟೀ, ಕಾಫಿ ಅಲ್ಲ.

ನಿಯಮ 2: ನಿದ್ರೆ – ದಿನಕ್ಕೆ 7–8 ಗಂಟೆ ನಿದ್ರೆ ಕಡ್ಡಾಯ. ರಾತ್ರಿ 11ರೊಳಗೆ ಮಲಗಲು ಪ್ರಯತ್ನಿಸಿ. ನಿದ್ರೆ ಕಡಿಮೆಯಾದರೆ ಹಾರ್ಮೋನ್ ಕೆಟ್ಟು ಬೊಜ್ಜು ಬರುತ್ತದೆ.

ನಿಯಮ 3: ಚಲನೆ – ಜಿಮ್‌ಗೆ ಹೋಗಬೇಕು ಎಂದಿಲ್ಲ. ದಿನಕ್ಕೆ 30 ನಿಮಿಷ ಬಿರುಸಿನ ನಡಿಗೆ, ಮೆಟ್ಟಿಲು ಹತ್ತುವುದು, ಮನೆಯ ಕೆಲಸ ಮಾಡುವುದು ಸಾಕು. 1 ಗಂಟೆ ಕುಳಿತರೆ 5 ನಿಮಿಷ ಎದ್ದು ನಡೆಯಿರಿ.

ನಿಯಮ 4: ಒತ್ತಡ ಕಡಿಮೆ ಮಾಡಿ – ನಿರಂತರ ಒತ್ತಡದಿಂದಲೇ ಬಿಪಿ, ಶುಗರ್ ಬರುತ್ತದೆ. ದಿನಕ್ಕೆ 10 ನಿಮಿಷವಾದರೂ ಪ್ರಾಣಾಯಾಮ, ಧ್ಯಾನ, ದೇವರ ನಾಮಸ್ಮರಣೆ ಮಾಡಿ.

ನಿಯಮ 5: ಊಟದ ಸಮಯ ಪಾಲಿಸಿ – ಪ್ರತಿದಿನ ಒಂದೇ ಸಮಯಕ್ಕೆ ಊಟ ಮಾಡಿ. ಆಗ ಜೀರ್ಣಕ್ರಿಯೆ ಚೆನ್ನಾಗಿ ಆಗುತ್ತದೆ.

> ನೆನಪಿಡಿ: ಆಹಾರಕ್ಕಾಗಿ ಬದುಕಬೇಡಿ, ಬದುಕಲು ಆಹಾರ ಸೇವಿಸಿ. ಇವತ್ತು ಸ್ವಲ್ಪ ನಾಲಿಗೆ ಮೇಲೆ ಹಿಡಿತ ಇಟ್ಟರೆ, ನಾಳೆ ಮಾತ್ರೆಗಳ ಮೇಲೆ ಹಿಡಿತ ಇಡಬೇಕಾಗಿಲ್ಲ.



ಡಾ. ಶಿವಕುಮಾರ್
ಖ್ಯಾತ ವೈದ್ಯರು (ಸರ್ಜನ್)
ಮೊ: 90601 02094

Printed by : Ragavendra chari, Published by : Ragavendra chari, Owned by : Ragavendra chari, Printed at : Ragavendra Printers & Publishers, No, 6/7 Gayithri Nilaya, Maruthi Cross, Old post Office road, Ramurthy Nagar, Doorvani Nagar, Bengalore 560016, Published at : No, 6/7 Gayithri Nilaya, Maruthi Cross, Old post Office road, Ramurthy Nagar, Doorvani Nagar, Bengalore 560016, EADITOR : RAGAVENDRA CHARI